ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 136 RNI Number : KNKAN/25/A2770 25-05-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :136 ರಾಯಚೂರು 25-05-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಮತ್ತಷ್ಟು ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಅನಿವಾರ್ಯ

ನವದೆಹಲಿ: ಜಾಗತಿಕ ಇಂಧನ ಪೂರೈಕೆಯ ಅಡಚಣೆಗಳು ಇನ್ನಷ್ಟು ದಿನಗಳ ಕಾಲ ಮುಂದುವರಿದರೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಮತ್ತಷ್ಟು ಏರಿಕೆ ಅನಿವಾರ್ಯ ಆಗುತ್ತದೆ ಎಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(ಬಿಪಿಸಿಎಲ್)ನ ಮಾಜಿ ಉನ್ನತ ಅಧಿಕಾರಿ ರಾಜ್ ಕುಮಾರ್ ದುಬೆ ತಿಳಿಸಿದರು.

ಆರಂಭದಲ್ಲಿ, ಶೇ.20ರಿಂದ 50ರಷ್ಟು ಜಾಗತಿಕ ತೈಲ ಬೆಲೆ ಏರಿಕೆಯನ್ನು ತಾತ್ಕಾಲಿಕ ಎಂದು ಪರಿಗಣಿಸಿದ್ದೆವು. ಆದರೆ, ಈಗಿನ ವಿದ್ಯಮಾನಗಳನ್ನು ಗಮನಿಸಿದರೆ, ಬೆಲೆ ಏರುಗತಿಯಲ್ಲಿ ಮುಂದುವರಿಯುವಂತೆ ಕಾಣುತ್ತಿದೆ ಎಂದು ಅವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಪರಿಸ್ಥಿತಿ ನಿಭಾಯಿಸಲು ಪೆಟ್ರೋಲ್ ಪಂಪ್‌ಗಳಲ್ಲಿ ಬೆಲೆ ಏರಿಸುವುದು, ಪೆಟ್ರೋಲಿಯಂ ಕಂಪನಿಗಳು ನಷ್ಟ ಹೀರಿಕೊಳ್ಳುವುದು ಮತ್ತು ಸರ್ಕಾರಿ ನಿಧಿಗಳಿಂದ ಕೊರತೆ ನೀಗುವುದಷ್ಟೇ ಉಳಿದಿರುವ ದಾರಿಗಳೆಂದು ಅವರು ಹೇಳುತ್ತಾರೆ.



ಶನಿವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಲೀಟರ್‌ಗೆ 87-91 ಪೈಸೆ ಹೆಚ್ಚಿಸಲಾಗಿದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಏರುತ್ತಿರುವ ಅಂತಾರಾಷ್ಟ್ರೀಯ ತೈಲ ಬೆಲೆಗಳನ್ನು ಅದಕ್ಕೆ ಸರಿದೂಗಿಸಿದ್ದರಿಂದ ಚಿಲ್ಲರೆ ಇಂಧನ ದರಗಳಲ್ಲಿ ಒಟ್ಟು 10 ದಿನಗಳಲ್ಲಿ ಸುಮಾರು 5 ರೂ.ಗೆ ಏರಿಕೆಯಾಗಿದೆ.

ಇದರೊಂದಿಗೆ ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ಬೆಲೆಗಳೂ ಕೆ.ಜಿಗೆ 1 ರೂ. ಹೆಚ್ಚಾಗಿದೆ.

ಚಿಲ್ಲರೆ ಇಂಧನ ಬೆಲೆಗಳು ದೀರ್ಘಕಾಲದಿಂದ ಏರದಿರುವುದು, ಜಾಗತಿಕ ಮಾರುಕಟ್ಟೆಗಳಲ್ಲಿ ಹೆಚ್ಚಿದ ಕಚ್ಚಾ ತೈಲ ಬೆಲೆ, ಸಂಸ್ಕರಣಾ ವೆಚ್ಚಗಳ ಏರಿಕೆ ಮತ್ತು ಅಮೆರಿಕದ ಡಾಲರ್ ಎದುರು ರೂಪಾಯಿ ದುರ್ಬಲಗೊಂಡಿರುವುದೆಲ್ಲವೂ ಆಮದು ವೆಚ್ಚವನ್ನು ಭಾರೀ ಪ್ರಮಾಣದಲ್ಲಿ ಏರಿಸಿವೆ ಎನ್ನುತ್ತಾರೆ ದುಬೆ.

ಮೇ 15ರಂದು ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು ಬೆಲೆ ಏರಿಸಿದ್ದರಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಲೀಟರ್‌ಗೆ ಸುಮಾರು 5 ರೂ.ಷ್ಟು ಹೆಚ್ಚಾಗಿವೆ. ಇದು ಹಣದುಬ್ಬರದ ಒತ್ತಡಗಳು ಮತ್ತು ಆರ್ಥಿಕತೆಯಾದ್ಯಂತ ಹೆಚ್ಚಿನ ಸಾರಿಗೆ ವೆಚ್ಚಗಳ ಬಗ್ಗೆ ಕಳವಳ ಸೃಷ್ಟಿಸಿದೆ. ಮೇ 15ರಂದು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಲೀಟರ್‌ಗೆ ತಲಾ 3 ರೂ. ಮತ್ತು ಮೇ 19ರಂದು ಲೀಟರ್‌ಗೆ 90 ಪೈಸೆ ಹೆಚ್ಚಿಸಲಾಗಿತ್ತು.

ಇಂಧನ ಬೆಲೆಗಳ ಏರಿಕೆಯ ಕುರಿತು ಮಾತನಾಡುತ್ತಾ ದುಬೆ, ಮಧ್ಯಪ್ರಾಚ್ಯದಲ್ಲಿ ಇಂಧನ ಮೂಲಸೌಕರ್ಯ ನಾಶವಾಗಿರುವುದನ್ನು ಒತ್ತಿ ಹೇಳುತ್ತಾ, ಅವುಗಳನ್ನು ಪುನರ್ನಿರ್ಮಿಸಲು ಬಹಳ ಸಮಯ ಬೇಕಾಗುತ್ತದೆ. ಆದ್ದರಿಂದ ಪ್ರಸ್ತುತ ಸನ್ನಿವೇಶದಲ್ಲಿ ಮತ್ತೊಂದು ಬೆಲೆ ಏರಿಕೆಯಾಗುವ ಸಾಧ್ಯತೆ ದಟ್ಟವಾಗಿದೆ ಎಂದರು.

ತೈಲ ಪೂರೈಕೆ ಕಳವಳಗಳ ಕುರಿತು ಮಾತನಾಡಿದ ಅವರು, ಭೌಗೋಳಿಕ ರಾಜಕೀಯ ಉದ್ವಿಗ್ನತೆಯ ಹೊರತಾಗಿಯೂ ಭಾರತವನ್ನು ಆಘಾತಗಳಿಂದ ರಕ್ಷಿಸುವಲ್ಲಿ ರಾಜತಾಂತ್ರಿಕ ಪ್ರಯತ್ನಗಳು ಮತ್ತು ಇಂಧನ ವೈವಿಧ್ಯೀಕರಣವನ್ನು ದುಬೆ ಮೆಚ್ಚಿಕೊಂಡಿದ್ದಾರೆ. ರಷ್ಯಾ, ಆಫ್ರಿಕಾ ಅಥವಾ ಇತರ ಹಲವು ಸ್ಥಳಗಳಿಂದ ಇಂಧನ ಪೂರೈಕೆ ಮೂಲಗಳ ವೈವಿಧ್ಯೀಕರಣ ಮಾಡಲು ನಮಗೆ ಸಾಧ್ಯವಿದೆ ಎಂದರು.

ಪಶ್ಚಿಮ ಏಷ್ಯಾ ಯುದ್ಧದ ನಂತರ ಭಾರತದಲ್ಲಿ ಇಂಧನ ಬಳಕೆ ಹೆಚ್ಚಾಗಿದೆ ಎಂದಿರುವ ದುಬೆ, ಹೀಗಿದ್ದರೂ ನಾವು ಯಾವುದೇ ಕೊರತೆ ಇಲ್ಲದೆ

3 ನೇ ಪುಟಕ್ಕೆ

ಅಭಿವೃದ್ಧಿಗೆ ಕಾಳಜಿ ಇಲ್ಲ, ಸಭೆಗಳಿಗೆ ಮಾತ್ರ ಸೀಮಿತ''ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಕಾಂಗ್ರೆಸ್ ಮುಖಂಡರ ವಾಗ್ದಾಳಿ

ಡಾ. ಜಗಜೀವನರಾಂ ಭವನಕ್ಕೆ ₹5 ಕೋಟಿ ಅನುದಾನ ನೀಡಿದ ಸಚಿವ ಬೋಸರಾಜು ಕಾರ್ಯಕ್ಕೆ ಮೆಚ್ಚುಗೆ

ರಾಯಚೂರು, ಮೇ.24-

''ಜಿಲ್ಲೆಯ ಅಭಿವೃದ್ಧಿ ಕಡೆ ಗಮನ ಹರಿಸಬೇಕಾದ ಜಿಲ್ಲಾ ಉಸ್ತುವಾರಿ ಸಚಿವರು ಕೇವಲ ಸಭೆ, ಸಮಾರಂಭ ಹಾಗೂ ಧ್ವಜಾ ರೋಹಣ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತರಾಗಿದ್ದಾರೆ'' ಎಂದು ಕಾಂಗ್ರೆಸ್ ಮುಖಂಡ ಹಾಗೂ ಆರ್.ಡಿ.ಎ ಸದಸ್ಯ ನರಸಿಂಹಲು ಮಾಡಗಿರಿ ತೀವ್ರ ವಾಗ್ದಾಳಿ ನಡೆಸಿದರು.



ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಯಚೂರು ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರು, ರಸ್ತೆ, ಒಳಚರಂಡಿ, ಬೀದಿ ದೀಪ, ಶಾಲಾ ಕಟ್ಟಡ ಸೇರಿದಂತೆ ಮೂಲಭೂತ ಸೌಕರ್ಯಗಳ ಸಮಸ್ಯೆಗಳು ದಿನದಿಂದ ದಿನಕ್ಕೆ ಗಂಭೀರವಾಗುತ್ತಿವೆ. ಅನೇಕ ವಾರ್ಡ್‌ಗಳಲ್ಲಿ ರಸ್ತೆಗಳು ಹಾಳಾ ಗಿದ್ದು, ಚರಂಡಿ ವ್ಯವಸ್ಥೆ ಕುಸಿದ ಪರಿಣಾಮ ಮಳೆಯ ಸಮಯದಲ್ಲಿ ಜನರು ನರಕಯಾತನೆ ಅನುಭವಿಸುವ ಸ್ಥಿತಿ ನಿರ್ಮಾಣವಾಗಿದೆ. ಆದರೆ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಬದಲು ಜಿಲ್ಲಾ ಉಸ್ತುವಾರಿ ಸಚಿವರು ಸಭೆಗಳಲ್ಲಿ ಭಾಗವಹಿಸುವುದರಲ್ಲೇ ಕಾಲ ಕಳೆಯುತ್ತಿದ್ದಾರೆ ಎಂದು ಆರೋಪಿಸಿದರು.

ಇದೇ ವೇಳೆ ಸಚಿವ ಎನ್.ಎಸ್. ಬೋಸರಾಜು ಅವರ ಜನಪರ ಕಾರ್ಯವನ್ನು ಶ್ಲಾಘಿಸಿದ ನರಸಿಂಹಲು ಮಾಡಗಿರಿ, ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ 19, 20 ಮತ್ತು 21ರಲ್ಲಿ ಸುಮಾರು 30 ರಿಂದ 35 ಸಾವಿರ ಮಾದಿಗ ಸಮುದಾಯದ ಜನರು ವಾಸಿಸುತ್ತಿದ್ದು, ಈ ಭಾಗದಲ್ಲಿ ಹಲವು ವರ್ಷಗಳಿಂದ ಸಮುದಾಯ ಭವನದ ಅಗತ್ಯವಿತ್ತು ಎಂದರು.

ಈ ಹಿಂದೆ ಇದ್ದ ಭವನ ಶಿಥಿಲಾವಸ್ಥೆಗೆ ತಲುಪಿದ್ದರಿಂದ, ಸುಮಾರು 25 ವರ್ಷಗಳ ಕನಸಾಗಿದ್ದ ನೂತನ ಸುಸಜ್ಜಿತ ಡಾ. ಜಗಜೀವನರಾಂ ಸಮುದಾಯ ಭವನ ನಿರ್ಮಾಣಕ್ಕೆ ಸಚಿವ ಎನ್.ಎಸ್. ಬೋಸರಾಜು ಅವರು ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚಿಸಿ ₹5 ಕೋಟಿ ಅನುದಾನ ಮಂಜೂರು ಮಾಡಿಸಿರುವುದು ಮಾದಿಗ ಸಮುದಾಯಕ್ಕೆ ದೊಡ್ಡ ಕೊಡುಗೆಯಾಗಿದೆ ಎಂದು ಹೇಳಿದರು.

ಇದರ ಜೊತೆಗೆ ವಾರ್ಡ್ ಸಂಖ್ಯೆ 19, 20 ಮತ್ತು 21ರ ಸರ್ಕಾರಿ ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ವಿವಿಧ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸುಮಾರು ₹20 ಕೋಟಿ ಅನುದಾನ ನೀಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಅಭಿವೃದ್ಧಿ ಕೆಲಸಗಳ ಮೂಲಕ ಜನರ ವಿಶ್ವಾಸ ಗಳಿಸುವುದು ಹೇಗೆ ಎಂಬುದನ್ನು ಸಚಿವ ಬೋಸರಾಜು ತೋರಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಮಹಾನಗರದ ಪ್ರಥಮ ಪ್ರಜೆಯ ಹೆಸರನ್ನೇ ವೇದಿಕೆಯಲ್ಲಿ ಪ್ರಸ್ತಾಪಿಸಿಲ್ಲ ಎಂದು ಟೀಕಿಸಿದ ಅವರು, ''ವಸಂತಕುಮಾರ ಅವರು ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡಿದವರಲ್ಲ'' ಎಂದು ಹರಿಹಾಯ್ದರು.

ರಾಯಚೂರಿನ ಸಮಗ್ರ ಅಭಿವೃದ್ಧಿಗೆ ಸರ್ಕಾರ ಸ್ಪಷ್ಟ ಯೋಜನೆ ರೂಪಿಸಿ, ನಗರದಲ್ಲಿನ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು, ರಸ್ತೆ, ಒಳಚರಂಡಿ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ತುರ್ತು ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನರಸಿಂಹಲು ರೆಡ್ಡಿ, ಮಣಿಕಂಠ, ರಾಮ ಪ್ರಸಾದ್, ವಸಂತ ಆರೋಲಿ, ತೇಜಸ್ವಿ, ಜಂಬಣ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರಾಜ್ಯ ಬಿಜೆಪಿಗೆ ಬೂಸ್ಟರ್ ಡೋಸ್ ಕೊಟ್ಟ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್

ಬೆಂಗಳೂರು,ಮೇ24-

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ತಮ್ಮ ಮೊದಲ ಬೆಂಗಳೂರು ಭೇಟಿ ಸಂದರ್ಭದಲ್ಲಿ ರಾಜ್ಯದ ಪ್ರಮುಖ ನಾಯಕರೊಂದಿಗೆ ಸಭೆ ನಡೆಸಿ, ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಮಹತ್ವದ ನಿರ್ದೇಶನಗಳನ್ನು ನೀಡಿದ್ದಾರೆ. ಪಕ್ಷದ ರಾಜ್ಯ ಕಚೇರಿಯಲ್ಲಿ ನಡೆದ ಈ ನಿರ್ಣಾಯಕ ಸಭೆಯಲ್ಲಿ, ಸಂಘಟನೆಯಲ್ಲಿ ಶಿಸ್ತು ಮತ್ತು ಬದ್ಧತೆ ಅತ್ಯಗತ್ಯತೆಯನು ಪ್ರತಿಪಾದಿಸಿರುವ ಅವರು, ರಾಜ್ಯ ಘಟಕದ ನಾಯಕರಿಗೆ ಪಕ್ಷದ ತಳಮಟ್ಟದ ಬಲವರ್ಧನೆಗೆ ಒತ್ತು ನೀಡಲು ಸೂಚಿಸಿದ್ದಾರೆ.

ಪಕ್ಷದ ಚೌಕಟ್ಟಿನೊಳಗೆ ಪ್ರತಿಯೊಬ್ಬ ಕಾರ್ಯಕರ್ತರೂ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಾರ್ವಜನಿಕವಾಗಿ ಪಕ್ಷದ ಘನತೆಗೆ ಧಕ್ಕೆಯಾಗುವ ಯಾವುದೇ ಹೇಳಿಕೆ ಅಥವಾ ಚಟುವಟಿಕೆಗಳನ್ನು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ. ಕೇವಲ ಕಚೇರಿಗಳಲ್ಲಿ ಕುಳಿತು ಕೆಲಸ ಮಾಡುವುದರ ಬದಲು, ಪ್ರತಿಯೊಬ್ಬ ಪದಾಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕ್ಷೇತ್ರಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಬೇಕು ಎಂದು ತಿಳಿಸಿದ್ದಾರೆ.

ಮುಂಬರುವ ದಿನಗಳಲ್ಲಿ ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳನ್ನು ವಿಸ್ತರಿಸಲು ನಾಯಕರಿಗೆ ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸಲಾಗಿದ್ದು, ಎಲ್ಲರೂ ಸಾಮೂಹಿಕ ನಾಯಕತ್ವದಲ್ಲಿ ಕಾರ್ಯನಿರ್ವಹಿಸುವಂತೆ ಕರೆ ನೀಡಿದ್ದಾರೆ. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ನಾಯಕರ ನಡುವೆ ಉತ್ತಮ ಸಮನ್ವಯತೆಯನ್ನು ಕಾಪಾಡಿಕೊಂಡು, ಪಕ್ಷದ ಸಿದ್ಧಾಂತಗಳನ್ನು ತಳಮಟ್ಟದವರೆಗೆ ಕೊಂಡೊಯ್ಯಲು ಒತ್ತು ನೀಡಬೇಕು ಎಂದು ಅವರು ಆಶಿಸಿದ್ದಾರೆ.

ಈ ಭೇಟಿಯು ರಾಜ್ಯ ಬಿಜೆಪಿಯಲ್ಲಿ ಹೊಸ ಹುರುಪು ತುಂಬಿದ್ದು, ಮುಂದಿನ ಸಾಂಸ್ಥಿಕ ಚುನಾವಣೆಗಳು ಮತ್ತು ಅಭಿವೃದ್ಧಿ ಕಾರ್ಯಗಳ ದೃಷ್ಟಿಯಿಂದ ಈ ಸೂಚನೆಗಳು ಅತ್ಯಂತ ಮಹತ್ವದ್ದಾಗಿವೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಭೇಟಿಯ ಮಹತ್ವವೇನು?:

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಸಿಕ್ಕ ಜಯದ ಬಳಿಕ, ದಕ್ಷಿಣ ಭಾರತದ ಹೆಬ್ಬಾಗಿಲಾದ ಕರ್ನಾಟಕದಲ್ಲಿ ಬಿಜೆಪಿ ಅಸ್ತಿತ್ವವನ್ನು ಗಟ್ಟಿಗೊಳಿಸುವುದು ಪಕ್ಷದ ಹೈಕಮಾಂಡ್‌ನ ಮುಖ್ಯ ಗುರಿಯಾಗಿದೆ. ರಾಜ್ಯ ಕೋರ್ ಕಮಿಟಿ ಸಭೆಯಲ್ಲಿ ಮುಂದಿನ ಕಾರ್ಯತಂತ್ರಗಳ ಬಗ್ಗೆ ಅಂತಿಮ ರೂಪುರೇಷೆ ಸಿದ್ದಪಡಿಸಿದ್ದಾರೆ.

ನಿತಿನ್ ನಬಿನ್ ಅವರ ಈ ಭೇಟಿಯು ಪಕ್ಷದ ಸಂಘಟನೆಗೆ ಹೊಸ ಹುರುಪು ತುಂಬುವ ನಿರೀಕ್ಷೆಯಿದೆ. ವಿಶೇಷವಾಗಿ ಹಿರಿಯ ನಾಯಕ ಯಡಿಯೂರಪ್ಪ ಅವರೊಂದಿಗಿನ ಅವರ ಉಪಾಹಾರ ಸಭೆಯು, ಪಕ್ಷದ ಹಿರಿಯ ಮತ್ತು ಕಿರಿಯ ನಾಯಕರ ನಡುವಿನ ಸಮನ್ವಯದ ಸಂಕೇತವಾಗಿದೆ ಎಂದು ಪಕ್ಷದ ಮುಖಂಡರು ಸಂತಸ ವ್ಯಕ್ತಪಡಿಸಿದ್ದಾರೆ.

ಕರ್ತವ್ಯಲೋಪ ಲಿಂಗಸುಗೂರು ಜಿಪಂ ಎಇಇ ಸೇರಿ ಸಿಬ್ಬಂದಿಗಳ ಅಮಾನತ್ತು



ಲಿಂಗಸುಗೂರು.ಮೇ.23-

ಪಟ್ಟಣದ ಜಿಲ್ಲಾಪಂಚಾಯತ ಇಂಜಿನೀಯರಿಂಗ್ ಸಿಬ್ಬಂದಿಯನ್ನು ಕರ್ತವ್ಯ ಲೋಪ ಮತ್ತು ಪ್ರಾಮಾಣಿಕತೆ ಕೊರತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಪ್ರಯುಕ್ತ ಕರ್ನಾಟಕ ನಾಗರೀಕ ಸೇವೆ ನಿಯಮಗಳ 1957 ರ ನಿಯಮ 10(1) ಲ ತಕ್ಷಣ ಜಾರಿಗೆ ಬರುವಂತೆ ಜಿಪಂ ಎಇಇ ಹನಮಪ್ಪ ಆದವಾನಿ, ಪ್ರಥಮ ದರ್ಜೆ ಸಹಾಯಕ ರಾಮಣ್ಣ ಪ್ರಜಾರಿ ಮತ್ತು ರಾತ್ರಿ ಪಾಳಯ ಕಾವಲುಗಾರ ಹನುಮಂತ ಅವರನ್ನು ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ) ಚೇತನ ಎಂ.ಮೇ.14 ರಂದು ಅಮಾನತ್ತು ಮಾಡಿ ಆದೇಶ ಹೊರಡಿಸಿರುತ್ತಾರೆ.

ಪಂಚಾಯತರಾಜ ಇಂಜಿನೀಯರಿಂಗ್ ಉಪವಿಭಾಗ ಕಚೇರಿಯಲ್ಲಿ ಮೇ.8 ರಂದು ರಾತ್ರಿ ವೇಳೆ ನಿವೃತ್ತ ನೌಕರರು ಹಾಗೂ ಇಲಾಖೆ ಸಿಬ್ಬಂದಿಗಳು ಪಾರ್ಟಿ ಮಾಡಿರುವ ಘಟನೆಗೆ ಸಂಬಂಧಿಸಿ ರಾಯಚೂರು ಜಿಪಂ

3 ನೇ ಪುಟಕ್ಕೆ

ಧಾರಕಾರ ಸುರಿದ ಭಾರಿ ಮಳೆಗೆ ಜ್ಯೋತಿ ನಗರ ನಿವಾಸಿಗಳು ಕಂಗಾಲು:ಕಣ್ಮುಚ್ಚಿ ಕುಳಿತ ಪಟ್ಟಣ ಪಂಚಾಯತ್ ಅಧಿಕಾರಿಗಳು

ಹಟ್ಟಿ: ಪಟ್ಟಣದಲ್ಲಿ ಸುರಿದ ಧಾರಾಕಾರ ಮಳೆಗೆ ಜೋಪುಡಿಗಳಿಗೆ ನುಗ್ಗಿದ ಮಳೆ ನೀರು ಹಾಗೂ ಚರಂಡಿ ನೀರಿನಿಂದ ಜೋಪುಡಿ ನಿವಾಸಿಗಳ ಸಂಕಷ್ಟವಾಗಿದೆ.



ಹಟ್ಟಿ ಚಿನ್ನದ ಗಣಿ ಪಟ್ಟಣದ ಪಾಮನಕಲ್ಲೂರು ಕ್ರಾಸ್ ಸಮೀಪದ ಸುಡುಗಾಡು ಸಿದ್ದರು ವಾಸಿಸುವ ಬಸವ ಜ್ಯೋತಿ ನಗರದಲ್ಲಿ ಇಂದು ರಾತ್ರಿ ಸುರಿದ ಭಾರೀ ಮಳೆಯಿಂದ ಮಳೆ ನೀರು ಮತ್ತು ಚರಂಡಿ ನೀರು ಜೋಪುಡಿಗಳಿಗೆ ನುಗ್ಗಿದ್ದು ನಿವಾಸಿಗಳು ನಿದ್ದೆಯಿಲ್ಲದೆ ರಾತ್ರಿಯಿಡೀ ಜೋಪುಡಿಗಳನ್ನು ಕಾಯುವ ಪರಿಸ್ಥಿತಿ ಎದುರಿಸುವಂತಾಗಿದೆ.

ಸರಿಯಾದ ಚರಂಡಿ ವ್ಯವಸ್ಥೆಯ ಕೊರತೆಯಿಂದ ಈ ಓಣಿಯ ನಿವಾಸಿಗಳು ದಿನನಿತ್ಯ ತೊಂದರೆ ಅನುಭವಿಸುತ್ತಿದ್ದು, ಮಳೆಯಾದಾಗ ಸಮಸ್ಯೆ ಮತ್ತಷ್ಟು ಗಂಭೀರವಾಗುತ್ತಿದೆ. ಈಗಲೂ ನಿರಂತರವಾಗಿ ಮಳೆ ಸುರಿಯುತ್ತಿರುವ ಹಿನ್ನಲೆ ನಿವಾಸಿಗಳ ಆತಂಕ ಹೆಚ್ಚಾಗಿದೆ.

ಪಟ್ಟಣ ಪಂಚಾಯತ್ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ಬಸವ ಜ್ಯೋತಿ ನಗರದಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ನಿರ್ಮಿಸಿ ಮಳೆ ನೀರು ಹಾಗೂ ಚರಂಡಿ ನೀರು ಸುಗಮವಾಗಿ ಹರಿದು ಹೋಗುವಂತೆ ಶಾಶ್ವತ ಪರಿಹಾರದ ಕ್ರಮ ಕೈಗೊಳ್ಳಬೇಕೆಂದು ಇಲ್ಲಿನ ನಿವಾಸಿಗಳು ಆಗ್ರಹಿಸಿದ್ದಾರೆ.

ಗಾಳಿ. ಮಳೆ ರಭಸಕ್ಕೆ ಹಿಟ್ಟಿನ ಗಿರಾಣಿ ಮನೆಯ ಮೇಲಿನ ತಗಡುಗಳು ಕಿತ್ತಾಡಿಕೊಂಡ ಕರೆಂಟ್ ಕಂಬಕ್ಕೆ ಸಿಕ್ಕಿ ಬಿದ್ದು- ಅನಾಹುತ ಸಂಭವಿಸಿಲ್ಲ

ಸಿಂಧನೂರು,ಮೇ.24-

ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಗಾಳಿ. ಮಳೆ ರಭಸಕ್ಕೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಿದ್ದರಾಂಪುರ ಗ್ರಾಮದ ನಿವಾಸಿಯಾಗಿದ್ದು ಸೋಮನಗೌಡ ತಂದೆ ಅಯ್ಯನಗೌಡ ಎಂಬವರು(ಹಿಟ್ಟಿನ ಗಿರಾಣಿ) ಮನೆಯ ಮೇಲಿನ ತಗಡುಗಳು ನಿನ್ನೆ ರಾತ್ರಿಯ ಗಾಳಿ ಮಳೆ ರಭಸಕ್ಕೆ ಕಿತ್ತುಕೊಂಡು ಹೋಗಿ ಕರೆಂಟ್ ಕಂಬದ ಲೈನ್ ಗಳಿಗೆ ಸಿಕ್ಕಿ ಹಾಕಿಕೊಂಡಿದ್ದು. ದೇವರ ಕೃಪೆ ಯಾರಿಗೂ ಏನೂ ಆಗಿರುವುದಿಲ್ಲ. ಇದನ್ನು ನೋಡಿ ಬೆಳಗ್ಗೆ ಕರೆಂಟ್ ಬರುವ ಹೊತ್ತಿಗೆ ಗ್ರಾಮಸ್ಥರು ತಗಡುಗಳನ್ನು ಹಗ್ಗದ ಸಹಾಯದಿಂದ ತೆಗೆದು ಅನಾಹುತ ಆಗುವುದನ್ನು ತಪ್ಪಿಸಿದ್ದಾರೆ.



ಇಡೀ ರಾತ್ರಿಲ್ಲ ಗಾಳಿ ಸಹಿತ ಮಳೆಯ ರಭಸಕ್ಕೆ ತಾಲೂಕಿನ ಸಿದ್ದರಾಂಪುರ್ ಗ್ರಾಮದ ನಿವಾಸಿ ಸೋಮನಗೌಡ ತಂದೆ ಅಯ್ಯನಗೌಡ ಎಂಬವರು ಹಲವು ವರ್ಷಗಳಿಂದ ಅದೇ ಗ್ರಾಮದಲ್ಲಿ ಹಿಟ್ಟಿನ ಗಿರಾಣಿ ಹಾಕಿಕೊಂಡು ಜೀವನ ನಡೆಸುತ್ತಿದ್ದರು.ನಿನ್ನ ಸಂಜೆ 7 ಗಂಟೆಯ ಸುಮಾರಿಗೆ ಮೋಡ್ ಕವಿದು ಏಕಾಏಕಿ ಗಾಳಿ ಸಹಿತ ಮಳೆ ರಭಸಕ್ಕೆ ಮನೆಯ ಮೇಲಿನ ತಗಡುಗಳು ಕಿತ್ತಿಕೊಂಡು ಹೋಗಿ ಕರೆಂಟ್ ಕಂಬದ ಲೈನ್ ಗಳಿಗೆ ಸಿಕ್ಕಿ ಹಾಕಿಕೊಂಡಿದ್ದು. ಯಾವುದೇ ಅನಾಹುತ ಸಂಭವಿಸಿಲ್ಲ.

ನಾಳೆ ತನಿಖೆ ನಡೆಸ ರಿಪೋರ್ಟ ಮಾಡಿ. ವರದಿಯನ್ನು ತಾಲೂಕು ತಹಶೀಲ್ದಾರ್ ಅವರಿಗೆ ನೀಡುತ್ತೇನೆ.ಎಂದು ಗ್ರಾಮ ಲೆಕ್ಕಾಧಿಕಾರಿ ಅಲಂಭಾಷ ಅವರನ್ನು ಪೋನ್ ಕರೆ ಮೂಲಕ ಪತ್ರಕರ್ತರ ವಿಚಾರಿಸಿದಾಗ ತಿಳಿಸಿದರು.

ರಾಜ್ಯದ ಅನೇಕ ಕಡೆಗೆ ಮುಂಗಾರು ಪೂರ್ವ ಮಳೆ ಪ್ರಾರಂಭವಾಗಿದ್ದು. ಈಗಾಗಲೇ ಹವಾಮಾನ ಇಲಾಖೆ 17 ಜಿಲ್ಲೆಗಳಿಗೆ ಭಾನುವಾರ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ರಾಯಚೂರು. ಯಾದಗಿರಿ. ಬಾಗಲಕೋಟೆ.ವಿಜಯನಗರ ದಾವಣಗೆರೆ. ಬಳ್ಳಾರ ದಕ್ಷಿಣ ಕನ್ನಡ ಸೇರಿದಂತೆ ಮೇ 24 ರಂದು ಗುಡುಗು ಮಿಂಚು.ಗಾಳಿ ಸಹಿತ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದಾರೆ

3 ನೇ ಪುಟಕ್ಕೆ

ಬಿಜೆಪಿ ಸಂಘಟನಾತ್ಮಕ ಸಭೆ:

ಮುಂಬರುವ ಚುನಾವಣೆಗೆ ಮುಖಂಡರು ಕಾರ್ಯಕರ್ತರು ಸಜ್ಜಾಗಿ - ರವೀಂದ್ರ ಜಲ್ದಾರ್

ಸಿರವಾರ.ಮೇ.24-

ರಾಜ್ಯದಲ್ಲಿ ಈ ವರ್ಷ ಚುನಾವಣೆ ಪರ್ವವೆ ಜರುಗುವ ಸಾದ್ಯತೆ ಇದೆ, ಮುಖಂಡರು, ಕಾರ್ಯಕರ್ತರು ಜನಸಾಮಾನ್ಯರಿಗೆ ಬಿಜೆಪಿ ಸಾಧನೆ ತಿಳಿಸುವ ಮೂಲಕ ಜಿ.ಪಂ- ತಾ.ಪಂ, ಗ್ರಾ.ಪಂ ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೆಲುವಂತೆ ಶ್ರಮಿಸಿ ಎಂದು ರಾಯಚೂರು ಜಿಲ್ಲಾ ಬಿಜೆಪಿ ಪ್ರ. ಕಾರ್ಯದರ್ಶಿ ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ರವೀಂದ್ರ ಜಲ್ದಾರ್ ಹೇಳಿದರು. ಸಿರವಾರ ಬಿಜೆಪಿ ಮಂಡಲ ಅಧ್ಯಕ್ಷ ಆರ್ ಕೆ ಅಮರೇಶಪ್ಪ ಸಾಹುಕಾರ ಗೃಹ ಕಚೇರಿ ಯಲ್ಲಿ ಸಿರವಾರ ಮಂಡಲದ ಬಿಜೆಪಿ ಸಂಘಟನಾತ್ಮಕ ಸಭೆಯಲ್ಲಿ ಮಾತನಾಡಿ ಪಕ್ಷದ ವಿವಿಧ ಕಾರ್ಯಯೋಜನೆಗಳ ಬಗ್ಗೆ ಸಭೆಯಲ್ಲಿ ಸಮಗ್ರವಾಗಿ ವಿವರಿಸಿ ವಿಶೇಷವಾಗಿ ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಐಆರ್ ಕುರಿತು ಬೂತ್ ಮಟ್ಟದಲ್ಲಿ ಅತ್ಯಂತ ಹೆಚ್ಚಿನ ರೀತಿಯಾಗಿ ಪರಿಣಾಮಕಾರಿಯಾಗಿ ಕಾರ್ಯಕರ್ತರು ಕೆಲಸ ಮಾಡಬೇಕು ಸಿರವಾರ ಮಂಡಲದಲ್ಲಿ ಬರುವ ಮೂರು ಜಿ. ಪಂ. ಕ್ಷೇತ್ರಗಳಾದ 1.ಮಲ್ಲಟ, 2.ಬಾಗಲವಾಡ ಮತ್ತು 3.ಕಲ್ಲೂರು ಕ್ಷೇತ್ರಗಳ ವ್ಯಾಪ್ತಿಯಲ್ಲಿ



3 ನೇ ಪುಟಕ್ಕೆ



ಬೇಸಿಗೆ ಶಿಬಿರಗಳು ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸುತ್ತವೆ : ಸುವರ್ಣ ಆರುಂಡಿ ನಾಗರಾಜ್

ಹರಪನಹಳ್ಳಿ ,ಮೇ.24-

ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಆತ್ಮವಿಶ್ವಾಸ, ಕಲ್ಪನಾ ಶಕ್ತಿ ಹಾಗೂ ತಂಡದ ಸಹಕಾರ ಮನೋಭಾವ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸುವರ್ಣ ಆರುಂಡಿ ನಾಗರಾಜ್ ಹೇಳಿದರು.

ನಗರದ ಕಾಶಿಮಠ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸ್ಥಳೀಯ ಕತ್ತಲೆ ಬೆಳಕು ಟ್ರಸ್ಟ್ ಆಯೋಜಿಸಿದ್ದ ನಾಲ್ಕನೇ ವರ್ಷದ ''ಚಿಲಿಪಿಲಿ ಚಿಣ್ಣರ ಮೇಳ'' ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪೋಷಕರು ತಮ್ಮ ಮಕ್ಕಳನ್ನು ಸೃಜನಾತ್ಮಕ ರಂಗಭೂಮಿ ಶಿಬಿರಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಶಿಬಿರದಲ್ಲಿ ಅಭಿನಯ, ರಂಗಭೂಮಿ ಆಟಗಳು, ಕಥೆ ಹೇಳುವಿಕೆ, ರಂಗಗೀತೆ, ಸಂಭಾಷಣೆ ಅಭ್ಯಾಸ, ದೇಹಭಾಷೆ ಹಾಗೂ ಧ್ವನಿ ತರಬೇತಿ ಸೇರಿದಂತೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ಹಲವು ಚಟುವಟಿಕೆಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ, ವೇದಿಕೆಯ ಮೂಲಕ ಅದನ್ನು ಹೊರತರುವುದೇ ಈ ಶಿಬಿರದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಹಿರಿಯ ಮುಖಂಡ ಆರುಂಡಿ ನಾಗರಾಜ್, ಶಿಕ್ಷಕರಾದ ಚನ್ನಬಸಪ್ಪ ಹಾಗೂ ಶೋಭ, ಕತ್ತಲೆ ಬೆಳಕು ಟ್ರಸ್ಟ್ ಅಧ್ಯಕ್ಷ ಅರುಣ ಕುಮಾರ್ ಮೇದಾರ, ರಂಗ ನಿರ್ದೇಶಕ ಸೋಮಶೇಖರ್ ಕಾರಿಗನೂರು, ಟಿ. ಶ್ಯಾಮಲಾ ಸೇರಿದಂತೆ ಪೋಷಕರು ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಅಂಬೇಡ್ಕರ್ ಜಯಂತ್ಯೋತ್ಸವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ



ಕಂಪ್ಲಿ ,ಮೇ.24-

ಸ್ಥಳೀಯ ಚಲವಾದಿಕೇರಿಯಲ್ಲಿ ಅಂಬೇಡ್ಕರ್ ಅನುಯಾಯಿಗಳ ಬಳಗ ಹಾಗೂ ಜೆಬಿ ಕಿಂಗ್ಸ್ ಆಶ್ರಯದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತ್ಯೋತ್ಸವದಲ್ಲಿ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪಿಐ ವಾಸುಕುಮಾರ್, ಕಂಪ್ಲಿ ಜೆಸ್ಕಾಂ ಎಇಇ ಕೆ. ಶ್ರೀನಿವಾಸ ಪ್ರಸಾದ್, ದಿಶಾ ಸಮಿತಿ ಸದಸ್ಯ ಎ.ಸಿ. ದಾನಪ್ಪ, ಪ್ರಾಚಾರ್ಯ ಸಿದ್ದಣ್ಣ ಪರಮೇಶ್ವರ, ಶಿಕ್ಷಕ ರಮೇಶ್ ಸುಗ್ಗೇನಹಳ್ಳಿ ಸೇರಿದಂತೆ ಹಲವರು ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವ, ಆದರ್ಶ ಹಾಗೂ ಜೀವನ ಚರಿತ್ರೆ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಎಂ.ಸಿ. ಮಾಯಪ್ಪ, ಸಿದ್ದಿ ಅಂಜಿನಪ್ಪ, ಚನ್ನಪ್ಪ, ಟಿ. ಶಿವಪ್ಪ ಹಾಗೂ ಬಳಗದ ಪದಾಧಿಕಾರಿಗಳಾದ ಯೋಗರಾಜ್, ಸುನೀಲ್, ಸುರೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆಗೆ ಅಖಿಲ ಭಾರತ ವೀರಶೈವ ಲಿಂಗಾಯತ ಯುವ ವೇದಿಕೆಯ ಜಿಲ್ಲಾ ಅಧ್ಯಕ್ಷ ಹೊಸಕೋಟೆ ಜಗದೀಶ್ ಚಾಲನೆ ನೀಡಿದರು.

ಪರೀಕ್ಷೆ ಬರೆದಿದ್ದ ವಿದ್ಯಾರ್ಥಿನಿ ಆತ್ಮಹತ್ಯೆ

ಕಲಬುರಗಿ :

ನೀಟ್ ಪರೀಕ್ಷೆ ಬರೆದಿದ್ದ ಯುವತಿ ಯೊಬ್ಬಳು ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಕೋರ್ಟ್ ವೃತ್ತದ ಬಳಿಯ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದೆ.



ಭಾಗ್ಯಶ್ರೀ ರಾಜಶೇಖರ್ (18) ಮೃತ ವಿದ್ಯಾರ್ಥಿನಿಯಾಗಿದ್ದು, ಕಳೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.92 ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದರು. ವೈದ್ಯಕೀಯ ಶಿಕ್ಷಣದ ಕನಸು ಕಂಡಿದ್ದ ಭಾಗ್ಯಶ್ರೀ, ಇತ್ತೀಚೆಗೆ ಮೇ 2 ರಂದು ನೀಟ್ ಪರೀಕ್ಷೆ ಬರೆದಿದ್ದರು ಎಂದು ತಿಳಿದುಬಂದಿದೆ.

ಈ ಕುರಿತು ಮೃತಳ ತಂದೆ ರಾಜಶೇಖರ್ ಮಾತನಾಡಿ, ಮಗಳಿಗೆ ನೀಟ್ ಪರೀಕ್ಷೆಯ ಬಗ್ಗೆ ಬಹಳ ನಿರೀಕ್ಷೆಗಳಿದ್ದವು. ಆದರೆ ಫಲಿತಾಂಶದ ಬಗ್ಗೆ ಯಾವುದೇ ಆತಂಕ ಇತ್ತೋ ಗೊತ್ತಿಲ್ಲ. ಡೆತ್‌ನೋಟ್ ಸಿಕ್ಕಿಲ್ಲ. ಆತ್ಮಹತ್ಯೆಗೆ ಕಾರಣವೂ ತಿಳಿಸಿಲ್ಲ. ನಮ್ಮ ಜೊತೆಗೆ ತುಂಬಾ ಚೆನ್ನಾಗಿಯೇ ಇದ್ದಳು. ನಾವು ಯಾರ ಮೇಲೂ ದೂರು ನೀಡುವುದಿಲ್ಲ ಎಂದು ಕಣ್ಣೀರಿಟ್ಟರು.

ಸುದ್ದಿ ತಿಳಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಸ್ಟೇಷನ್ ಬಝಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.

ಶಿಕ್ಷಣದೊಂದಿಗೆ ಶಿಸ್ತು, ಗುರಿ ಸಾಧನೆ ಅಗತ್ಯ



ಜಮಖಂಡಿ,ಮೇ..24-

'ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಶಿಸ್ತು, ಸಮಯಪಾಲನೆ ಹಾಗೂ ಗುರಿ ಸಾಧನೆಯ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಜೀವನದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯ' ಎಂದು ಗ್ರಾಮದ ಮುಖಂಡ ಶ್ರೀಶೈಲ ಬುದ್ದಿ ಹೇಳಿದರು.

ತಾಲ್ಲೂಕಿನ ಹುನ್ನೂರು ಗ್ರಾಮದ ಶ್ರೀ ಬನಶಂಕರಿ ದೇವಾಲಯದಲ್ಲಿ ಇತ್ತೀಚೆಗೆ ನಡೆದ ದೇವಾಂಗ ಸಮಾಜದ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪರಿಶ್ರಮ, ಆತ್ಮವಿಶ್ವಾಸ ಮತ್ತು ಶಿಸ್ತು ಇದ್ದರೆ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದರು. ಕರ್ನಾಟಕ ಅಚಿವರ್ಸ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಸಾಧನೆ ಮಾಡಿದ ಶಿವಾನಿ.ಎಂ.ಹೊಳ್ಳೂರು ಸನ್ಮಾನಿಸಿದರು.

ವೇದಿಕೆ ಮೇಲೆ ರಾಮಪ್ಪ ಕಾಮಗೊಂಡ, ಶ್ರೀಶೈಲ ಕೋಳಿ, ಶಂಕರ ಮರೆಗುದ್ದಿ, ರುದ್ರಪ್ಪ ಕೋಲಾರ, ಈರಪ್ಪ ಹನಗಂಡಿ, ಸಿದ್ದಮಲ್ಲಪ್ಪ ಗಡೆಪ್ಪನವರ, ಕಾಡಪ್ಪ ಮರೆಗುದ್ದಿ, ಶ್ರೀಶೈಲ ಹನಗಂಡಿ, ರಾಜು ಕೋಲಾರ, ಚೇತನ ಕಾಮಗೊಂಡ, ವಿನಯ ಕೋಲಾರ ಇದ್ದರು.

ಜಾಲಿ ಗಿಡ ತೆರವಿಗೆ ಒತ್ತಾಯ

ಕುಡತಿನಿ (ಸಂಡೂರು),ಮೇ.24-

ಪಟ್ಟಣದ ಮೂರನೇ ವಾರ್ಡ್‌ನಲ್ಲಿನ ರಸ್ತೆಯಲ್ಲಿ ಹರಡಿದ ಜಾಲಿ ಗಿಡವನ್ನು ತೆರವುಗೊಳಿಸುವಂತೆ ಒತ್ತಾಯಿಸಿ ವಾರ್ಡ್ ನಿವಾಸಿಗಳು, ರಕ್ಷಣಾ ವೇದಿಕೆಯ ಕಾವಲು ಪಡೆಯ ಮುಖಂಡರು ಶನಿವಾರ ಪ್ರತಿಭಟನೆ ನಡೆಸಿದರು.

ರಕ್ಷಣಾ ವೇದಿಕೆಯ ಕಾವಲು ಪಡೆಯ ಕುಡತಿನಿ ಘಟಕದ ಅಧ್ಯಕ್ಷ ಕೆ. ನಾಗರಾಜ ಮಾತನಾಡಿ, ಪಟ್ಟಣದ ಮೂರನೇ ವಾರ್ಡ್‌ನಲ್ಲಿನ ರಸ್ತೆಯಲ್ಲಿ ಜಾಲಿ ಬೇಲಿಯು ಹೆಚ್ಚಿನ ಪ್ರಮಾಣದಲ್ಲಿ ಹರಡಿದ್ದು ಜನರು ಸಂಚಾರಕ್ಕಾಗಿ ಪರದಾಡುತ್ತಿದ್ದಾರೆ. ಜಾಲಿ ಗಿಡ ದಟ್ಟವಾಗಿ ಹರಡಿದ್ದರಿಂದ ವಿವಿಧ ವಾಹನಗಳ ಸವಾರರಿಗೆ ಅಪಘಾತವಾಗಿದ್ದು, ವಾಹನಗಳ ಸವಾರರು ಪ್ರಾಣ ಭಯದಲ್ಲೇ ಸಂಚರಿಸುವಂತಾಗಿದೆ. ಸ್ಥಳೀಯ ಪಟ್ಟಣ ಪಂಚಾಯಿತಿಯ ಅಧಿಕಾರಿಗಳು ಶೀಘ್ರವಾಗಿ ರಸ್ತೆಗೆ ಹರಡಿದ ಜಾಲಿ ಗಿಡವನ್ನು ತೆರೆಗೊಳಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಕಾಮಗಾರಿಗಳಿಗೆ ಮರಳು ಗಣಿಗಾರಿಕೆಗೆ ಅನುಮತಿ : ಎಚ್.ಡಿ.ರಾಜೇಶ್

ಕಂಪ್ಲಿ ,ಮೇ.24-

ತಾಲೂಕಿನ ಸರ್ಕಾರಿ ಕಾಮಗಾರಿಗಳಿಗೆ ಮರಳಿನ ಕೊರತೆ ಉಂಟಾಗಿರುವ ಹಿನ್ನೆಲೆ ಲೋಕೋಪಯೋಗಿ ಇಲಾಖೆಗೆ ಮರಳು ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ ಎಂದು ಬಳ್ಳಾರಿ ಉಪವಿಭಾಗದ ಸಹಾಯಕ ಆಯುಕ್ತ ಎಚ್.ಡಿ. ರಾಜೇಶ್ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನಲ್ಲಿ ಅಧಿಕೃತ ಮರಳು ಬ್ಲಾಕ್ ಇಲ್ಲದ ಕಾರಣ ಸರ್ಕಾರಿ ಕಾಮಗಾರಿಗಳು ಹಾಗೂ ಸಾರ್ವಜನಿಕರ ಕಟ್ಟಡ ನಿರ್ಮಾಣ ಕಾರ್ಯಗಳಿಗೆ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ತುಂಗಭದ್ರಾ ನದಿ ತೀರದಲ್ಲಿರುವ ಮರಳು ಲಭ್ಯ ಪ್ರದೇಶವನ್ನು ಕಂದಾಯ ಇಲಾಖೆ ಗುರುತಿಸಿದ್ದು, ಸಣಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಳಿಹಳ್ಳಿ ತಾಂಡ ಸಮೀಪ ಮರಳು ಗಣಿಗಾರಿಕೆಗೆ ಲೋಕೋಪಯೋಗಿ ಇಲಾಖೆಗೆ ಪರವಾನಗಿ ನೀಡಲಾಗಿದೆ ಎಂದು ಹೇಳಿದರು.

ಸರ್ಕಾರದಮಾರ್ಗಸೂಚಿಯಂತೆ ಲೋಕೋಪ ಯೋಗಿ ಇಲಾಖೆ ಮರಳು ಗಣಿಗಾರಿಕೆ ನಡೆಸಿ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಸಲಿದೆ. ಜೊತೆಗೆ ಖಾಸಗಿಯವರಿಗೂ ನಿಯಮಾನುಸಾರ ಮರಳು ವಿತರಿಸಲಾಗುವುದು ಎಂದು ತಿಳಿಸಿದರು.



ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ಪುರಸಭೆ ಮುಖ್ಯಾಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ಹೇಳಿದರು. ಬೀದಿ ದೀಪಗಳ ನಿರ್ವಹಣೆ, ಕುರುಗೋಡು ರಸ್ತೆಯ ದ್ವಿಪಥ ರಸ್ತೆಯ ಜೋಡಿ ಬೀದಿ ದೀಪಗಳ ದುರಸ್ತಿ ಹಾಗೂ ನೀರು ಸರಬರಾಜಿನ ರೈಸಿಂಗ್ ಪೈಪ್‌ಲೈನ್ ದುರಸ್ತಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದರು.

ಐತಿಹಾಸಿಕ ಸೋಮಪ್ಪನ ಕೆರೆ ದಂಡೆಯ ಮುಖ್ಯರಸ್ತೆ ಹಾಗೂ ಪಟ್ಟಣದ ಪಾದಚಾರಿ ಮಾರ್ಗಗಳಲ್ಲಿ ನಡೆದಿರುವ ಅತಿಕ್ರಮಣ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ಸಣಾಪುರ ರಸ್ತೆಯ ಎರಡೂ ಬದಿಗಳ ಅತಿಕ್ರಮಣವನ್ನು ಶೀಘ್ರ ತೆರವುಗೊಳಿಸದಿದ್ದರೆ ಸ್ವತಃ ತಾವೇ ಬಂದು ಕಾರ್ಯಾಚರಣೆ ನಡೆಸುವುದಾಗಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿ ಮೂಲಭೂತ ಸೌಕರ್ಯಗಳಿಗೆ ಅಡಚಣೆ ಉಂಟಾದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಜೂಗಲ್ ಮಂಜುನಾಯಕ, ಕಂದಾಯ ಹಾಗೂ ಪುರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರೋಧಿಸಿ ಗ್ರಾಮಸ್ಥರಿಂದ ಪ್ರತಿಭಟನೆ



ಕಂಪ್ಲಿ ,ಮೇ.24-

ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ತಾಲೂಕಿನ ದೇವಸಮುದ್ರ ಗ್ರಾಮದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮುಚ್ಚಬಾರದು ಎಂದು ಆಗ್ರಹಿಸಿ, ಶಾಲೆ ಮುಂದೆ ''ನಮ್ಮೂರ ಶಾಲೆ ನಮ್ಮಯ ಕಣ್ಮಣಿ'' ಎಂಬ ಬ್ಯಾನರ್ ಅಳವಡಿಸಿ ಗ್ರಾಮಸ್ಥರು ಹೋರಾಟ ನಡೆಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಜಿಲ್ಲಾ ಕಾರ್ಯದರ್ಶಿ ಕಂಬಳಿ ಮಂಜುನಾಥ ಮಾತನಾಡಿ, ರಾಜ್ಯಾದ್ಯಂತ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ವಿರುದ್ಧ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದರೂ ಸರ್ಕಾರ ಯೋಜನೆ ಜಾರಿಗೆ ಮುಂದಾಗಿರುವುದು ಖಂಡನೀಯ ಎಂದು ಹೇಳಿದರು.


ಈ ಯೋಜನೆಯಿಂದ ಬಡವರು ಓದುತ್ತಿರುವ ಸರ್ಕಾರಿ ಶಾಲೆಗಳು ಮುಚ್ಚಲ್ಪಟ್ಟು, ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಧಕ್ಕೆಯಾಗಲಿದೆ. ರೈತರು, ಕೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಮಕ್ಕಳು 4-5 ಕಿ.ಮೀ ದೂರದ ಶಾಲೆಗಳಿಗೆ ಹೋಗುವುದು ಕಷ್ಟಕರವಾಗಿದೆ. ಅನೇಕ ಗ್ರಾಮಗಳಲ್ಲಿ ಸರಿಯಾದ ರಸ್ತೆ ಮತ್ತು ಬಸ್ ಸೌಲಭ್ಯಗಳೇ ಇಲ್ಲ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರಿ ಶಾಲೆಗಳನ್ನು ಮುಚ್ಚುವ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಸರ್ಕಾರ ತಕ್ಷಣ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಮಹಾತ್ಮಾ ಜ್ಯೋತಿರಾವ್ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಅವರು ಶೋಷಿತರು ಹಾಗೂ ಮಹಿಳೆಯರ ಶಿಕ್ಷಣಕ್ಕಾಗಿ ಹೋರಾಟ ನಡೆಸಿದಂತೆ, ಇಂದು ಸರ್ಕಾರಿ ಶಾಲೆ ಉಳಿಸಲು ಎಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಎಐಕೆಕೆಎಂಎಸ್ ರೈತ ಸಂಘಟನೆಯ ಜಿಲ್ಲಾ ಅಧ್ಯಕ್ಷ ಗೋವಿಂದ, ಗ್ರಾಮಸ್ಥರಾದ ತಿಪ್ಪೇಸ್ವಾಮಿ, ಕರಿಯಪ್ಪ, ಮಲ್ಲಿ, ಸಿದ್ದು ಹಾಗೂ ಪೋಷಕರು ಭಾಗವಹಿಸಿದ್ದರು.

ಸಮಾಜ ಸೇವೆಯಿಂದ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಯುತ್ತದೆ: ಸುಖದೇವ ಕಟ್ಟಿಮನಿ



ಅಫಜಲಪುರ ,

ಸಮಾಜ ಸೇವೆಯ ಮೂಲಕ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಸೇವಾ ಮನೋಭಾವ ಹಾಗೂ ಸಾಮಾಜಿಕ ಕಳಕಳಿ ಬೆಳೆಯುತ್ತದೆ ಎಂದು ಕಲಬುರಗಿ ನಗರದ ಪಾರಸ್ ಎಂ.ಎಸ್.ಡಬ್ಲ್ಯೂ ಕಾಲೇಜಿನ ಪ್ರಾಂಶುಪಾಲ ಸುಖದೇವ ಕಟ್ಟಿಮನಿ ಹೇಳಿದರು.

ತಾಲೂಕಿನ ದೇವಲ ಗಾಣಗಾಪೂರದ ಯತಿರಾಜ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಾರ್ಥ್ ಕರ್ನಾಟಕ ಡೆಕ್ಕನ್ ಫೌಂಡೇಶನ್, ಪಾರಸ್ ಸಮಾಜ ಕಾರ್ಯ ಮಹಾವಿದ್ಯಾಲಯ ಕಲಬುರಗಿ ಹಾಗೂ ಮಹಾತ್ಮಾ ಗಾಂಧಿ ಸಮಾಜ ಕಾರ್ಯ ಮಹಾವಿದ್ಯಾಲಯ ಅಫಜಲಪುರ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ''ಸಮಾಜ ಕಾರ್ಯ ಶಿಬಿರ''ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಸಮಾಜ ಸೇವೆಯೇ ಶ್ರೇಷ್ಠ ಸೇವೆಯಾಗಿದ್ದು, ಇಂತಹ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವದ ಜೊತೆಗೆ ನಾಯಕತ್ವ ಗುಣಗಳನ್ನು ಬೆಳೆಸುವ ಮಹತ್ವದ ವೇದಿಕೆಗಳಾಗಿವೆ'' ಎಂದು ಹೇಳಿದರು.

ಪಾರಸ್ ಸಮಾಜ ಕಾರ್ಯ ಮಹಾವಿದ್ಯಾಲಯದ ಪ್ರಾಂಶುಪಾಲ ರಾಜಕುಮಾರ ಬಳೂರ್ಗಿ ಮಾತನಾಡಿ, ಗ್ರಾಮೀಣ ಸಮಸ್ಯೆಗಳನ್ನು ಅರಿತು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುವ ಮನೋವೃತ್ತಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಇಂತಹ ಶಿಬಿರಗಳು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಶಿಬಿರದ ಸಹ ನಿರ್ದೇಶಕಿ ಬಸೀರಾ ಗೊಟ್ಯಾಳ ಮಾತನಾಡಿ, ಸಮಾಜ ಕಾರ್ಯ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಹಾಗೂ ಜನಸೇವೆಯ ಚಿಂತನೆಗಳನ್ನು ಗಟ್ಟಿಗೊಳಿಸುತ್ತವೆ ಎಂದರು.

ಉಪನ್ಯಾಸಕರಾದ ಗುರು ಗಂಗನಳ್ಳಿ ಹಾಗೂ ಪ್ರಭು ಬಿರದಾರ ಶಿಬಿರದ ಮಹತ್ವವನ್ನು ವಿವರಿಸಿದರು.

ಶಿಬಿರದಲ್ಲಿ ಸ್ವಚ್ಛತಾ ಅಭಿಯಾನ, ವರದಕ್ಷಿಣೆ ಪೀಡನೆ, ಸಾರಾಯಿ ನಿಷೇಧ ಹಾಗೂ ಬಾಲಕಿಯರ ಮೇಲಿನ ದೌರ್ಜನ್ಯ ತಡೆ ಕುರಿತು ಜಾಗೃತಿ ಕಾರ್ಯಕ್ರಮಗಳು ನಡೆಯಿತು. ಪ್ರಾಸ್ತಾವಿಕವಾಗಿ ಮಲ್ಲಿಕಾರ್ಜುನ ಕಂಟಿ ಮಾತನಾಡಿದರು. ಶಿಬಿರದ ಉದ್ದೇಶವನ್ನು ಜೈ ಭೀಮ ವಿವರಿಸಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕಿ ಮೈನಾಜ್ ಬೇಗಂ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಜ್ಯೋತಿ ಅಲಂಕಾರ ಸ್ವಾಗತಿಸಿದರು. ಚಂದ್ರಕಲಾ ಹಾಗೂ ಸೌಜನ್ಯ ಪ್ರಾರ್ಥನಾ ಗೀತೆ ನಡೆಸಿಕೊಟ್ಟರು. ಶಿಬಿರಾರ್ಥಿ ಸಿದ್ದರಾಮ ಶಿವಣಗಿ ನಿರೂಪಿಸಿದರು. ಅಪರಂಜಿ ಮೇತ್ರಿ ವಂದನಾರ್ಪಣೆ ಸಲ್ಲಿಸಿದರು.



ವಿದ್ಯಾರ್ಥಿ ರತ್ನ, ಸಾಧಕ ರತ್ನ ಪ್ರಶಸ್ತಿ ಪ್ರದಾನ

ಕಲಬುರಗಿ,ಮೇ.24-

ಹೈದರಾಬಾದ್ ಕರ್ನಾಟಕ ಯುವ ಕಲಾವಿದರ ಸಂಘ ಹಾಗೂ ಸಾಂಸ್ಕೃತಿಕ ನೃತ್ಯ ಸಂಘಗಳ ವತಿಯಿಂದ ನಗರದ ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ 11ನೇ ವರ್ಷದ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ನೃತ್ಯ, ಸಂಗೀತ ಪ್ರದರ್ಶನಗಳು, ವಿದ್ಯಾರ್ಥಿ ರತ್ನ ಹಾಗೂ ಸಾಧಕ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭಗಳು ಗಮನಸೆಳೆದವು.

ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿ ಮಾತನಾಡಿ, ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸಂಘ ಹಲವು ವರ್ಷಗಳಿಂದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಡಾ.ಸುರೇಶ ಶರ್ಮಾ, ಡಾ. ಅಮರೇಶ್ವರಿ ಬಾಬುರಾವ ಚಿಂಚನಸೂರ, ನೀಲಕಂಠರಾವ ಮೂಲಗೆ, ನಟಿ ಕಾವ್ಯ, ಸಂಘದ ಸಂಸ್ಥಾಪಕ ಅಧ್ಯಕ್ಷ ಗುರು ಬಂಡಿ, ಉದ್ಯಮಿ ಅಭಿಷೇಕ ಬಾಲಾಜಿ, ಡಾ. ಸಿದ್ದು ಪಾಟೀಲ್, ಡಾ. ಸಂಪತ ಹಿರೇಮಠ, ಶ್ಯಾಮ್ ಕಂದೇವಾಲ, ಡಾ. ಸುನೀಲ್ ರಾಠೋಡ, ಶೃತಿ ಹತ್ತಿ, ನಾಗೇಶ ಪಾಟೀಲ್ ಅಷ್ಟೂರ, ಸುರೇಂದ್ರ ನರೋಣಾಕರ್, ವಿಜಯಕುಮಾರ ಎಸ್. ಕಟ್ಟಿಮನಿ, ಜಯಶ್ರೀ ಬಿರದಾರ, ಎಂ.ಎ. ಸಿದ್ದಿಕಿ, ಸುಪ್ರಿಯಾ ಎ., ಅಲ್ಲಮಪ್ರಭು ಮಠಪತಿ ಹಾಗೂ ಭೀಮರಾವ್ ಎಸ್. ಹಳ್ಳಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿವಿಧ ಕಲಾ ತಂಡಗಳು ನೃತ್ಯ ಹಾಗೂ ಸಂಗೀತ ಪ್ರದರ್ಶನ ನೀಡಿ ಪ್ರೇಕ್ಷಕರ ಮನರಂಜನೆ ಮಾಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ''ಸಾಧಕ ರತ್ನ'' ಪ್ರಶಸ್ತಿ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ''ವಿದ್ಯಾರ್ಥಿ ರತ್ನ'' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಸಂಘದ ಪದಾಧಿಕಾರಿಗಳು, ಕಲಾವಿದರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಜನಪದ ಕಲೆ ಉಳಿಸಿ ಬೆಳೆಸಿರಿ : ನೀಲಕಂಠರಾವ ಮೂಲಗೆ



ಕಲಬುರಗಿ,ಮೇ..224-

ನಮ್ಮ ಆಧುನಿಕ ಜೀವನ ಶೈಲಿಯಲ್ಲಿ ಜನಪದ ಕಲೆಗಳು ನಶಿಸಿ ಹೋಗುತ್ತಿವೆ. ಅವುಗಳನ್ನು ಉಳಿಸಿ ಬೆಳೆಸಬೇಕು ಎಂದು ಕಾಂಗ್ರೆಸ್ ಹಿರಿಯ ಮುಖಂಡ ನೀಲಕಂಠರಾವ ಮೂಲಗೆ ಕರೆ ನೀಡಿದರು.

ನಗರದ ಕನ್ನಡ ಭವನದಲ್ಲಿ ಮಿನುಗುತಾರೆ ಮಹಿಳಾ ಕಲಾವಿದರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದಲ್ಲಿ ಏರ್ಪಡಿಸಿದ ಜನಪದ ಸೊಗಡು ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂಟರನೆಟ್ ಯುಗದಲ್ಲಿ ಬದುಕುತ್ತಿರುವ ನಾವುಗಳು ನಮ್ಮ ಮೂಲ ಜನಪದ ಪರಂಪರೆ ಮರೆಯಬಾರದು. ಕವಿ ಕಲಾವಿದರು ಜನಪದ ಸಂಭ್ರಮ ಜಿಲ್ಲೆಯಲ್ಲಿ ಇನ್ನಷ್ಟು ಹೆಚ್ಚಿಸಬೇಕು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಧರ್ಮಣ್ಣ ಎಚ್.ಧನ್ನಿ ಅಧ್ಯಕ್ಷತೆ ವಹಿಸಿ, ಜನಪದ ಕಲೆಗಳು ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆ ಹೆಚ್ಚಿಸುತ್ತವೆ. ಆದರೆ ಆ ಕಲೆಗಳು ನಶಿಸಿ ಹೋಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷೆ ಕಲ್ಪನಾ ಗೋಲ್ಡಸ್ಮಿತ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಕಲಾವಿದರಿಂದ ಜನಪದ ಹಾಡುಗಳು ಪ್ರಸ್ತುತ ಪಡಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶಿವಕುಮಾರ ಸ್ವಾಮಿ ಖ್ಯಾತ ಉದ್ದಿಮೆದಾರ ಎಂ ಜಿ ಗಣಾಚಿ ಹಿರಿಯ ಸಂಗೀತ ಕಲಾವಿದರಾದ ಸಚಿನ ಪರತಾಬಾದ, ಬಸವರಾಜ ಸಾಲಿ, ನಾಗರಾಜ ಪರಾಂಕರ ಸಂಗೀತ ಕಲಾವಿದರು ಮತ್ತು ಅನನ್ಯ ನೃತ್ಯ ಕಲಾ ತಂಡದ ವತಿಯಿಂದ ಭರತನಾಟ್ಯ ಹಾಗೂ ಸಂಗೀತ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಈ ಮುಖ್ಯ ಅತಿಥಿಗಳಾಗಿ ಶಿವಕುಮಾರ್ ಸ್ವಾಮಿ ಖ್ಯಾತ ಉದ್ದಿಮೆದಾರ ಶಿವಕುಮಾರ, ಕಲಾವಿದರಾದ ಬಸವರಾಜ ಸಾಲಿ, ನಾಗರಾಜ ಪರಾಂಕರ ಉಪಸ್ಥಿತರಿದ್ದರು. ನಾಗಲಿಂಗಯ್ಯ ತಾವರಮಠ ವಂದಿಸಿದರು.

ಒಂದನೇಯ ಪುಟದಿಂದ

ಮತ್ತಷ್ಟು ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಅನಿವಾರ್ಯ

ನಿರ್ವಹಿಸಲು ಸಮರ್ಥರಾಗಿದ್ದೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹಸಿರು ಇಂಧನದ ಮಹತ್ವ: ಈ ಬಿಕ್ಕಟ್ಟು ಭಾರತದಲ್ಲಿ ಹಸಿರು ಇಂಧನದ ಬದಲಾವಣೆಯನ್ನು ವೇಗಗೊಳಿಸಲಿದೆ. 200 ಗಿಂತ ಹೆಚ್ಚು ಸೌರಶಕ್ತಿಯನ್ನು ಸ್ಥಾಪಿಸುವುದರೊಂದಿಗೆ ಈಗ ಆ ನಿಟ್ಟಿನಲ್ಲಿ ನಮ್ಮ ವೇಗವೂ ಹೆಚ್ಚುತ್ತದೆ. ಏಕೆಂದರೆ ಹಸಿರುವ ಇಂಧನ ವಿದೇಶಿ ವಿನಿಮಯ ಸಮಸ್ಯೆಗಳನ್ನು ಖಂಡಿತವಾಗಿಯೂ ನಿವಾರಿಸುತ್ತದೆ ಎಂದು ಅವರು ಹೇಳಿದರು.

ಇದರ ಜತೆಗೆ, ಶೇ.20ರಷ್ಟು ಎಥೆನಾಲ್ ಮಿಶ್ರಣದಂಥ ಕ್ರಮ ಬಹಳ ಒಳ್ಳೆಯ ಮತ್ತು ಪೂರ್ವಭಾವಿ ನಿಲುವೆಂದು ದುಬೆ ಕರೆದಿದ್ದಾರೆ. ಇಲ್ಲದೆ ಇದ್ದರೆ, ಶೇ.20ಕ್ಕೂ ಹೆಚ್ಚು ಪೆಟ್ರೋಲ್ ಕೊರತೆ ಉಂಟಾಗಿ, ವಿದೇಶಿ ವಿನಿಮಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿತ್ತು ಎಂದು ಹೇಳಿದರು.

ಈ ನಿಟ್ಟಿನಲ್ಲಿ ಹಸಿರು ಶಕ್ತಿಗಳಾದ ಸೌರ ಮತ್ತು ಹೈಡ್ರೋಜನ್ ಇಂಧನ ಮೂಲಗಳ ವೈವಿಧ್ಯೀಕರಣ ಬಹಳ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ದುಬೆ ಮಾತು.

ಕರ್ತವ್ಯಲೋಪ ಲಿಂಗಸುಗೂರು ಜಿಪಂ ಎಇಇ ಸೇರಿ ಸಿಬ್ಬಂದಿಗಳ ಅಮಾನತ್ತು

ಕಾರ್ಯಪಾಲಕ ಇಂಜಿನೀಯರ್ ಅವರು ಜಿಪಂ ಎಇಇ ಹನುಮಪ್ಪ ಆದವಾನಿ ಅವರಿಗೆ ನಾಗರಿಕ ಸೇವೆ ನಿಯಮಗಳ ಅನುಸಾರ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಏಕೆ ವರದಿ ಮಾಡಬಾರದು ಎಂಬುದಕ್ಕೆ ಕಾರಣ ಕೇಳಿ ನೋಟೀಸು ಜಾರಿ ಮಾಡಿದ್ದರು. ಅಧಿಕಾರಿಗಳು,ನೌಕರರು ಬೇಜವಾರಿತನ, ನಿರ್ಲಕ್ಷ್ಯತನವಹಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ನಾಟಕ ನಾಗರಿಕ ಸೇವೆ ನಿಯಮಗಳು 2021 ರ ನಿಯಮ ಉಲ್ಲಂಘಿಸಿ ತಮ್ಮ ಕರ್ತವ್ಯದಲ್ಲಿ ದಿವ್ಯನಿರ್ಲಕ್ಷ್ಯತೆ ತೋರಿ ಗಂಭೀರ ದುರ್ನಡತೆ ಎಸಗಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಅಮಾನತ್ತು ಮಾಡಿ ಆದೇಶಿಸಲಾಗಿದೆ


ಗಾಳಿ. ಮಳೆ ರಭಸಕ್ಕೆ ಹಿಟ್ಟಿನ ಗಿರಾಣಿ ಮನೆಯ ಮೇಲಿನ ತಗಡುಗಳು ಕಿತ್ತಾಡಿಕೊಂಡ ಕರೆಂಟ್ ಕಂಬಕ್ಕೆ ಸಿಕ್ಕಿ ಬಿದ್ದು- ಅನಾಹುತ ಸಂಭವಿಸಿಲ್ಲ

ಹಾಗಾಗಿ ಸಾರ್ವಜನಿಕರು ಗುಡುಗು ಮಿಂಚು ಸಿಡಿಲು ಗಾಳಿ ಮಳೆ ಬರುವಾಗ ಹೊರಗಡೆಗೆ ಹೋಗದಂತೆ ಎಚ್ಚರವಹಿಸಿ ಎಂದು ಈಗಾಗಲೇ ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿ ಸಂಘಟನಾತ್ಮಕ ಸಭೆ: ಮುಂಬರುವ ಚುನಾವಣೆಗೆ ಮುಖಂಡರು ಕಾರ್ಯಕರ್ತರು ಸಜ್ಜಾಗಿ - ರವೀಂದ್ರ ಜಲ್ದಾರ್

ಬಿಎಲ್ 2 ಒಳಗೊಂಡು ಬಿಎಲ್ 1 ಹಾಗೂ ಮಂಡಲ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯ ದರ್ಶಿಗಳು, ಕಾರ್ಯದರ್ಶಿಗಳು ಅಂತೆಯೇ ಎಲ್ಲಾ ಪದಾಧಿಕಾರಿಗಳು ಮತ್ತು ಎಲ್ಲಾ ಮೋರ್ಚಾಗಳ ಪ್ರಮುಖರ ಜೊತೆ ಅತಿ ಶೀಘ್ರದಲ್ಲಿ ಸಭೆಗಳನ್ನು ಆಯೋಜಿಸಿ ಪಕ್ಷದ ಗೆಲುವಿಗೆ ರೂಪುರೇಷೆಗಳನ್ನು ಹಾಕಿಕೊಳ್ಳಿ ಎಂದು ಮಂಡಲ ಅಧ್ಯಕ್ಷರಿಗೆ ಸೂಚಿಸಿದರು. ಆರ್ ಕೆ ಅಮರೇಶಪ್ಪ ಸಾಹುಕಾರ ಮಾತನಾಡಿ ಪಕ್ಷದ ಗೆಲುವಿಗೆ ಶಕ್ತಿ ಮೀರಿ ಶ್ರಮವಹಿಸಿ ಸಂಘಟನಾತ್ಮಕವಾಗಿ ಪಕ್ಷವನ್ನ ಬಲಿಷ್ಠಗೊಳಿಸಿ ಮುಂಬರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆದ್ದೆ ಗೆಲ್ಲುತ್ತಾರೆ, ಪ.ಪಂಚಾಯತಿ ವಾರ್ಡ ನಂ 01 ಕೃಷ್ಣನಾಯಕರಿಂದ ತೆರವಾದ ಸ್ಥಾನಕ್ಕೆ ಸೂಕ್ತ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಸ್ಥಾನವನ್ನು ಉಳಿಸಿಕೊಳುತ್ತೆವೆ ಎಂಬ ಆತ್ಮವಿಶ್ವಾಸವನ್ನ ವ್ಯಕ್ತಪಡಿಸಿದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಲ್ಲಿಕಾರ್ಜುನ ಜಕ್ಕಲದಿನ್ನಿ, ಸುಬ್ಬರಾವ್ ತುಮು, ಯುವ ಮುಖಂಡರಾದ ಉಮೇಶ್ ಜೇಗರಕಲ್, ಪ್ರ.ಕಾ. ಉದಯ್ ಕುಮಾರ್ ಚಾಗಭಾವಿ, ಮಲ್ಲಿಜಾ ರ್ಜುನ ಸಿಕಂಟಿ, ವಿರುಪಾಕ್ಷಿ ಗೌಡ ನೂಗುಡೋಣಿ, ಶಿವಲಿಂಗಯ್ಯ ಜಂಬಲದಿನ್ನಿ, ಸುರೇಶ್ ಗೌಡ, ಪಾಮತಪ್ಪ ಗೌಡ, ಉಮಾಪತಿ ಹರವಿ, ಮಲ್ಲಿಕಾರ್ಜುನ ಜೇಗರ ಕಲ್, ಬಸವರಾಜ ಕವಿತಾಳ್, ನಾಗಪ್ಪ ಎಲ್ ಐ ಸಿ, ವೆಂಕಟೇಶ್ ಜಾಲಪೂರ್, ಶಿವಾನಂದ ನವಲ್ಕಲ್, ಮಾರೆಪ್ಪ ಸಿರವಾರ, ಸಂಜೀವ್ ರೆಡ್ಡಿ ಹುಷೇನಪುರ್, ಇನ್ನೂ ಪಕ್ಷದ ಹಲ ವಾರು ಪದಾಧಿಕಾರಿಗಳು, ಕಾರ್ಯ ಕರ್ತರು,ವಿವಿದ ಮೋರ್ಚಾಗಳ ಅಧ್ಯಕ್ಷರು ಉಪಸ್ಥಿತರಿದ್ದರು.

ಅಮೆರಿಕದ ಶ್ವೇತಭವನ ಸಮೀಪ ಗುಂಡಿನ ದಾಳಿ; ಶಂಕಿತನ ಹತ್ಯೆ; ಓರ್ವನಿಗೆ ಗಾಯ



ವಾಷಿಂಗ್ಟನ್ ಡಿ.ಸಿ(ಯುಎಸ್),ಮೇ.24-

ಶ್ವೇತಭವನದ ಸೆಕ್ಯೂರಿಟಿ ಚೆಕ್ ಪಾಯಿಂಟ್ ಸಮೀಪ ಬಂದು ಬಂದೂಕುದಾರಿ ವ್ಯಕ್ತಿಯೊಬ್ಬ ಮನಬಂದಂತೆ ಗುಂಡಿನ ದಾಳಿ ನಡೆಸಿದ್ದು, ಆತನನ್ನು ಭದ್ರತಾ ಸಿಬ್ಬಂದಿ ಪ್ರತಿದಾಳಿ ನಡೆಸಿ ಹತ್ಯೆ ಮಾಡಿದ್ದಾರೆ. ಶನಿವಾರ ಸಂಜೆ 6ರ ಸುಮಾರಿಗೆ ಘಟನೆ ನಡೆದಿದೆ. ಈ ಸಂದರ್ಭದಲ್ಲಿ ಗುಂಡು ತಗುಲಿ ಇತರೆ ಓರ್ವ ವ್ಯಕ್ತಿಯೂ ಗಾಯ ಗೊಂಡಿದ್ದಾನೆ.

ಸೆಕ್ಯೂರಿಟ್ ಬೂತ್ ಸಮೀಪ ಬಂದ ಓರ್ವ ವ್ಯಕ್ತಿ, ತನ್ನ ಬ್ಯಾಗ್‌ನಿಂದ ಶಸ್ತ್ರಾಸ್ತ್ರ ತೆಗೆದು ಗುಂಡು ಹಾರಿಸಲು ಶುರು ಮಾಡಿದ. ಸೀಕ್ರೆಟ್ ಸರ್ವೀಸಸ್ ಸಿಬ್ಬಂದಿ ಪ್ರತಿದಾಳಿ ನಡೆಸಿದಾಗ ಆತ ಗಾಯಗೊಂಡ. ನಂತರ ಆಸ್ಪತ್ರೆಗೆ ಸಾಗಿಸುವ ಸಂದರ್ಭದಲ್ಲಿ ಸಾವನ್ನಪ್ಪಿದ್ದಾನೆ. ಸೀಕ್ರೆಟ್ ಸರ್ವೀಸಸ್‌ನ ಯಾವುದೇ ಸಿಬ್ಬಂದಿಗೆ ಗಾಯವಾಗಿಲ್ಲ ಎಂದು ಸೀಕ್ರೆಟ್ ಸರ್ವೀಸಸ್ ಮಾಹಿತಿ ನೀಡಿದೆ.


ಅಲ್ಲಿ ಕೆಲಸ ಮಾಡುತ್ತಿದ್ದ ಪತ್ರಕರ್ತರೊಬ್ಬರು ಗುಂಡಿನ ಶಬ್ದಗಳನ್ನು ಕೇಳಿದ್ದಾರೆ. ಅವರಿಗೆ ತಕ್ಷಣ ಪತ್ರಿಕಾಗೋಷ್ಠಿಯ ಕೊಠಡಿ ಯೊಳಗೆ ಆಶ್ರಯ ಪಡೆಯಲು ಸೂಚಿಸಲಾಯಿತು. ಅಲ್ಲಿ ಸೀಕ್ರೆಟ್ ಸರ್ವೀಸಸ್ ಅಧಿಕಾರಿಗಳು ಅವರಿಗೆ ರಕ್ಷಣೆ ನೀಡಿದರು. ಈ ಘಟನೆಯ ಸಮಯದಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶ್ವೇತಭವನ ದಲ್ಲಿದ್ದರು ಎಂದು ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ನಿರ್ದೇಶಕ ಕಾಶ್ ಪಟೇಲ್ ತಿಳಿಸಿದ್ದಾರೆ.

ಅಮೆರಿಕದಲ್ಲಿ ರಾಜಕೀಯ ಹಿಂಸಾಚಾರಗಳಿಗೆ ಜಾಗವಿಲ್ಲ. ದುರದೃಷ್ಟವಶಾತ್, ಇದೆಲ್ಲ ಸಾಮಾನ್ಯವಾಗುತ್ತಿದೆ. ರಾಜಕೀಯ ಹಿಂಸಾಚಾರ ಯಾವುದೇ ಕಾರಣಕ್ಕೂ ಉತ್ತರವಲ್ಲ. ಇದು ಇಲ್ಲಿಗೆ ನಿಲ್ಲಬೇಕು ಎಂದು ಅಮೆರಿಕ ಕಾಂಗ್ರೆಸ್‌ನ ಪ್ರತಿನಿಧಿ ರ್ಯಾಂಡಿ ಫೈನ್ ಒತ್ತಾಯಿಸಿದ್ದಾರೆ.

ಕೆಲವು ವಾರಗಳ ಹಿಂದೆ, ಶ್ವೇತಭವನದಲ್ಲಿ ಭೋಜನಕೂಟ ನಡೆಯುತ್ತಿದ್ದ ಸಂದರ್ಭದಲ್ಲೇ ಗುಂಡಿನ ದಾಳಿ ನಡೆದಿತ್ತು. ಇದನ್ನು ಟ್ರಂಪ್ ಅವರ ಹತ್ಯೆಗೆ ನಡೆದ ಸಂಚು ಎಂದು ಅಧಿಕಾರಿಗಳು ಹೇಳಿದ್ದರು. ಈ ಭೋಜನಕೂಟದಲ್ಲಿ ಅಧ್ಯಕ್ಷ ಟ್ರಂಪ್ ಸೇರಿದಂತೆ ಪ್ರಮುಖರು ಪಾಲ್ಗೊಂಡಿದ್ದರು. ದಾಳಿಯನ್ನು ಯಾವುದೇ ಪ್ರಾಣ ಹಾನಿಯಾಗಿರಲಿಲ್ಲ. ದಾಳಿಗೆ ಮುಂದಾದ ಆರೋಪಿಯನ್ನು ಪೊಲೀಸರು ಬಂಧಿಸಿ ತೀವ್ರ ವಿಚಾರಣೆಗೆ ಗುರಿಪಡಿಸಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಬಸವತತ್ವ ನಿಷ್ಠರು ರಾಜಕೀಯ ಕೊಳೆ ತೆಗೆಯಲಿ



ಬೀದರ್.ಮೇ.24-

ಬಸವವಾದಿಗಳು, ಬಸವತತ್ವ ನಿಷ್ಠರು ರಾಜಕೀಯದ ಕೊಳೆ ತೆಗೆಯಲು ಮುಂದಾಗಬೇಕು' ಎಂದು 'ಜಾಗೃತ ಕರ್ನಾಟಕ' ಸಂಘಟನೆಯ ಡಾ. ಎಚ್.ವಿ. ವಾಸು ಸಲಹೆ ಮಾಡಿದರು.

ನಗರದ ಬಸವಗಿರಿಯಲ್ಲಿ ಅಕ್ಕ ಅನ್ನಪೂರ್ಣತಾಯಿಯವರ ಸ್ಮರಣೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಎರಡು ದಿನಗಳ ಬಸವೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅನುಭಾವ ಮಂಡಿಸಿದರು.

ಒಳ್ಳೆಯ ಜನ ರಾಜಕಾರಣದಿಂದ ದೂರ ಇರಬಾರದು. ರಾಜಕೀಯ ಹಾಗೂ ಸಂಸಾರದಲ್ಲಿ ಒಳ್ಳೆಯ ಆಯ್ಕೆಗೆ ಬಸವಣ್ಣನವರ ಕಳಬೇಡ ವಚನ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಹೇಳಿದರು.

ಸಮಾಜ, ಸರ್ಕಾರ ಹಾಗೂ ಸಂಸಾರದಲ್ಲಿ ಬದಲಾವಣೆ ತರುವ ಶಕ್ತಿ ವಚನಗಳಿಗಿದೆ. ಎಂಟು ನೂರು ವರ್ಷ ಭೂಗತವಾಗಿದ್ದ ವಚನಗಳನ್ನು ಬೆಳಕಿಗೆ ತಂದವರು ಫ.ಗು. ಹಳಕಟ್ಟಿ. ಬಸವ ತತ್ವ ಪ್ರಸಾರ ಮಾಡಿದವರಲ್ಲಿ ಅಕ್ಕ ಅನ್ನಪೂರ್ಣತಾಯಿ ಅವರ ಹೆಸರು ಮೇಲ್ಪಂಕ್ತಿಯಲ್ಲಿದೆ. ಅಕ್ಕ ಅನ್ನಪೂರ್ಣ ತಾಯಿ ಅವರ ಕಾರ್ಯವನ್ನೇ ಮುಂದುವರಿಸಿರುವ ಪ್ರಭುದೇವ ಸ್ವಾಮೀಜಿ ಅವರ ಕಾರ್ಯ ರಾಜ್ಯಕ್ಕೆ ಮಾದರಿಯಾಗುತ್ತಿದೆ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಲಿಂಗಾಯತ ಮಹಾಮಠದ ಪ್ರಭುದೇವ ಸ್ವಾಮೀಜಿ, ಪ್ರಜಾಪ್ರಭುತ್ವದ ಬೀಜ ವಚನಗಳಲ್ಲೇ ಇದೆ. ಸಂವಿಧಾನದ ಆಶಯಗಳು, ಬದುಕನ್ನು ಉನ್ನತಿಗೇರಿಸುವ ಮೌಲ್ಯಗಳು ವಚನಗಳಲ್ಲಿ ಅಡಕವಾಗಿವೆ ಎಂದು ತಿಳಿಸಿದರು.

ಶರಣರ ನಾಡಿನಲ್ಲಿರುವ ನಾವು ವಚನಗಳ ಶ್ರೇಷ್ಠತೆಯ ಅರಿವಿಲ್ಲದೆ, ನಿಧಿ ಮೇಲೆ ಕುಳಿತು ತುತ್ತು ಅನ್ನಕ್ಕೆ ಕೈಚಾಚುವವರಂತಾಗಿದ್ದೇವೆ. ಅಂದು ಶರಣರು ಅಡುಗೆ ಮಾಡಿ ಇಟ್ಟಿದ್ದಾರೆ. ಈಗ ಅದನ್ನು ಬಡಿಸುವ ಕಾರ್ಯ ಪ್ರಾಮಾಣಿಕ ವಾಗಿ ಮಾಡಬೇಕಾಗಿದೆ ಎಂದರು.


ಕಲಬುರಗಿಯ ಅಕ್ಕಮಹಾದೇವಿ ಆಶ್ರಮದ ಮಾತೆ ಪ್ರಭುಶ್ರೀ ಮಾತನಾಡಿ, ಅಕ್ಕ ಅನ್ನಪೂರ್ಣತಾಯಿ ಸೈಕಲ್ ತುಳಿದು ಬಸವ ತತ್ವ ಪ್ರಚಾರಗೈದಿದ್ದರು. ಮಠ ಕಟ್ಟಿದ್ದರು. ಬಸವ ತತ್ವದ ಪುನರುತ್ಥಾನಗೈದಿದ್ದಾರೆ ಎಂದು ಹೇಳಿದರು.

ಬಿಜೆಪಿ ಮುಖಂಡ ನಾಗರಾಜ ಕರ್ಪೂರ ಮಾತನಾಡಿ, ಯುವಕರಿಗೆ ಅಕ್ಕ ಅನ್ನಪೂರ್ಣ ತಾಯಿ ಅವರ ಮಾತುಗಳೇ ಪ್ರೇರಣೆ ಎಂದು ಹೇಳಿದರು.

ರಾಷ್ಟ್ರೀಯ ಬಸವ ದಳದ ಜಿಲ್ಲಾ ಅಧ್ಯಕ್ಷ ಸೋಮಶೇಖರ ಪಾಟೀಲ ಗಾದಗಿ ಉದ್ಘಾಟಿಸಿದರು. ಕಲಬುರಗಿಯ ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಯಂಕಂಚಿ ಅಧ್ಯಕ್ಷತೆ ವಹಿಸಿದ್ದರು. ನಂಜನಗೂಡಿನ ಎಚ್.ಎಂ. ಮಂಜುಳಾ ಮಧು, ಬೇಲೂರಿನ ಉರಿಲಿಂಗ ಪೆದ್ದಿ ಮಠದ ಪಂಚಾಕ್ಷರಿ ಸ್ವಾಮೀಜಿ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ರಾಜಕುಮಾರ ಮಾಳಗೆ, ಉದ್ಯಮಿ ವೀರಶೆಟ್ಟಿ ಪಟ್ನೆ, ನೀಲಮ್ಮನ ಬಳಗದ ಸಂಗೀತಾ ಆರ್. ಪಾಟೀಲ, ಸಾಹಿತಿ ರಮೇಶ ಮಠಪತಿ ಇದ್ದರು. ಕೊಪ್ಪಳದ ವಿಶ್ವಗುರು ಬಸವೇಶ್ವರ ಟ್ರಸ್ಟ್ ಅಧ್ಯಕ್ಷ ವೀರಭದ್ರಪ್ಪ ನಂದ್ಯಾಳ್ ಷಟ್‌ಸ್ಥಲ ಧ್ವಜಾರೋಹಣಗೈದರು. ಶರಣ ಶರಣೆಯರು ವಚನ ಪಾರಾಯಣ ಮಾಡಿದರು. ಅಶ್ವಿನಿ ರಾಜಕುಮಾರ ಅವರ ಸಂಗೀತ ಮೆರುಗು ನೀಡಿತು. ಬಸವಕಲ್ಯಾಣದ ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ ಸಾಮೂಹಿಕವಾಗಿ ವಚನ ಓದಿಸಿ, ವಚನ ಪಾರಾಯಣಕ್ಕೆ ಚಾಲನೆ ನೀಡಿದರು. ಇದಕ್ಕೂ ಮುನ್ನ ಅಕ್ಕ ಅನ್ನಪೂರ್ಣತಾಯಿ ಅವರ ಐಕ್ಯ ಮಂಟಪದಲ್ಲಿ ಗುರುಬಸವ ಪೂಜೆ, ಪ್ರಾರ್ಥನೆ ಸಲ್ಲಿಸಿ, ಅಕ್ಕನವರಿಗೆ ಗೌರವ ಸಮರ್ಪಿಸಲಾಯಿತು.

ಪ್ರಿಯಾ ಎಲಿ, ಪೂರ್ಣಚಂದ್ರ ಮೈನಾಳೆ ವಚನ ನೃತ್ಯ ಪ್ರದರ್ಶಿಸಿದರು. ಚಂದ್ರಕಾಂತ ಪಟ್ನೆ, ಕಂಟೆಪ್ಪ ಗಂದಿಗುಡೆ, ಚಂದ್ರಶೇಖರ ಹೆಬ್ಬಾಳೆ ಹಾಗೂ ರೇವಣಪ್ಪ ಮೂಲಗೆ ವಚನ ಸಂಗೀತ ನಡೆಸಿಕೊಟ್ಟರು. ನೀಲಮ್ಮನ ಬಳಗದ ಗುರುಶ್ರೀ ಮಠಪತಿ ನಿರೂಪಿಸಿದರು. ಲಿಂಗಾಯತ ಸೇವಾ ದಳದ ಅಭಿಷೇಕ ಮಠಪತಿ ಸ್ವಾಗತಿಸಿದರು.

ಪರಿಹಾರ ಹಂಚಿಕೆಗೆ ಪಟ್ಟಿ ಸಿದ್ಧಪಡಿಸಿ



ಬಾಗಲಕೋಟೆ,ಮೇ.24-

'ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದಲ್ಲಿ ಮುಳುಗಡೆಯಾಗುವ ಭೂಮಿಗೆ ಪರಿಹಾರ ವಿತರಿಸಲು ಪಟ್ಟಿ ಸಿದ್ದಪಡಿಸಿ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ಶನಿವಾರ ನಡೆದ ಯುಕೆಪಿ ಮುಳುಗಡೆ ಭೂಮಿಗೆ ಪರಿಹಾರ ವಿತರಿಸುವ ಕುರಿತಂತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಪರಿಹಾರ ವಿತರಣೆಗೆ ಪಟ್ಟಿ ಮಾಡುವಂತೆ ಫೆಬ್ರುವರಿ ತಿಂಗಳಲ್ಲಿ ಸೂಚಿಸಲಾಗಿತ್ತು. ಇನ್ನೂ ಮಾಡಿಲ್ಲ. ನೀವು ಪಟ್ಟಿ ಮಾಡದಿದ್ದರೆ, ಸರ್ಕಾರದಿಂದ ಹಣ ಬಿಡುಗಡೆ ಆಗುವುದಿಲ್ಲ. ಕೂಡಲೇ ಪಟ್ಟಿ ಸಿದ್ದಪಡಿಸಿ ಎಂದು ಹೇಳಿದರು.

184 ಗ್ರಾಮಗಳ ಜಮೀನುಗಳು ಮುಳುಗಡೆಯಾಗುತ್ತಿವೆ. ಅವುಗಳಿಗೆ ಪರಿಹಾರ ಹಂಚಿಕೆಯನ್ನು ಯಾವ ಆಧಾರದ ಮೇಲೆ ಆದ್ಯತೆ ನೀಡುತ್ತಿದ್ದೀರಿ. ಹಂಚಿಕೆಗೆ ಯಾವ ಮಾನದಂಡ ಅನುಸರಿಸುತ್ತಿದ್ದೀರಿ. ಗೊಂದಲ ಸೃಷ್ಟಿ ಮಾಡಿದರೆ ಹಣ ಬಿಡುಗಡೆ ಮಾಡಿದರೂ ಸರ್ಕಾರಕ್ಕೆ ಕೆಟ್ಟು ಹೆಸರು ಬರುತ್ತದೆ. ಹಾಗೆ ಆಗದಂತೆ ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

ಜಿಲ್ಲೆಯ ಎಲ್ಲ ಪುನರ್ವಸತಿ ಕೇಂದ್ರಗಳಲ್ಲಿ ಸ್ಮಶಾನಕ್ಕೆ ಜಾಗ ನೀಡಬೇಕು. ಶೇ 50ಕ್ಕೂ ಹೆಚ್ಚು ಜನರು ಸ್ಥಳಾಂತರವಾದರೆ,

ಆ ಗ್ರಾಮಗಳಿಗೆ ಮೂಲಸೌಲಭ್ಯಗಳನ್ನು ಕಲ್ಪಿಸಲಾಗುವುದು. ಮುಳುಗಡೆ ಪರಿಹಾರ ತೆಗೆದುಕೊಂಡು 20 ವರ್ಷಗಳಾದರೂ ಕೆಲವು ಗ್ರಾಮಗಳಲ್ಲಿ ಜನರು ಸ್ಥಳಾಂತರಗೊಂಡಿಲ್ಲ. ಸ್ಥಳಾಂತರಕ್ಕೆ ಕ್ರಮಕೈಗೊಳ್ಳಬೇಕು. ಹಿನ್ನೀರಿನಲ್ಲಿ ನಡುಗಡ್ಡೆಗಳಾಗುವ ಪ್ರದೇಶದ ವರದಿ ನೀಡಬೇಕು ಎಂದು ಸೂಚಿಸಿದರು.

ಶಾಸಕ ಜೆ.ಟಿ. ಪಾಟೀಲ ಮಾತನಾಡಿ, ಆಸ್ತಿಯಲ್ಲಿ ಯಾವುದೇ ಡಿಪ್ರಿಸಿಯೇಷನ್ ಮಾಡಬಾರದು. ಆಸ್ತಿ ಮೌಲ್ಯಕ್ಕೆ ಹೆಚ್ಚುವರಿಯಾಗಿ ಶೇ20ರಷ್ಟು ನೀಡಬೇಕು. ಮುಂದಿನ ವರ್ಷಗಳಲ್ಲಿ ಪರಿಹಾರ ನೀಡುವವರೆಗೆ ಶೇ 10ರಷ್ಟು ಹೆಚ್ಚುವರಿಯಾಗಿ ನೀಡಬೇಕು. ಆಗ ರೈತರು ಸಮಾಧಾನದಿಂದ ಇರುತ್ತಾರೆ ಎಂದರು.

ಸಚಿವ ಆರ್.ಬಿ. ತಿಮ್ಮಾಪುರ ಮಾತನಾಡಿ, ಪ್ರತಿ ವರ್ಷ ಹೆಚ್ಚುವರಿಯಾಗಿ ಶೇ10ರಷ್ಟು ಪರಿಹಾರ ನೀಡುವ ಕುರಿತು ಪ್ರಸ್ತಾವ ಸಲ್ಲಿಸಿರಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮುಳುಗಡೆ ಸಂತ್ರಸ್ತರ ಹೋರಾಟ ಸಮಿತಿ ಅಧ್ಯಕ್ಷ ಅದೃಶ್ಯಪ್ಪ ದೇಸಾಯಿ ಮಾತನಾಡಿ, ವೈಜ್ಞಾನಿಕವಾಗಿ ಪಟ್ಟಿ ಮಾಡಿ ಹಂಚಿಕೆ ಮಾಡಬೇಕು. ಹಲವು ಪುನರ್ವಸತಿ ಕೇಂದ್ರಗಳಲ್ಲಿ ಸ್ಮಶಾನಗಳಿಲ್ಲ. ಸ್ಮಶಾನಕ್ಕೆ ಜಾಗ ನೀಡಬೇಕು ಎಂದು ಮನವಿ ಮಾಡಿದರು.

ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಕೆಲವು ಗ್ರಾಮಗಳನ್ನು ಬೇರೆ ಪಂಚಾಯಿತಿಗಳಿಗೆ ಸೇರಿಸಿ. ಅಲ್ಲಿನ ಭೂಮಿ ಉತಾರದಲ್ಲಿ ಪಂಚಾಯಿತಿಯ ಹೆಸರೇ ಬರುತ್ತಿದೆ. ಅವರ ಮೂಲ ಗ್ರಾಮದ ಹೆಸರೇ ಉಳಿಸಬೇಕು ಎಂದರು. ಇದಕ್ಕೆ ಶಾಸಕ ಜೆ.ಟಿ. ಪಾಟೀಲ ಸಹ ಧ್ವನಿಗೂಡಿಸಿದರು.

ಶಾಸಕ ಉಮೇಶ ಮೇಟಿ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಜಿಲ್ಲಾಧಿಕಾರಿ ಸಂಗಪ್ಪ, ಯುಕೆಪಿ ಪುನರ್ ವಸತಿ, ಪುನರ್ ನಿರ್ಮಾಣ ಇಲಾಖೆ ವ್ಯವಸ್ಥಾಪಕ ನಿರ್ದೇಶಕ ಗಜಾನನ ಬಾಲೆ, ಉಪ ಮಹಾವ್ಯವಸ್ಥಾಪಕ ಮಹಾದೇವ ಮುರಗಿ ಇದ್ದರು.



₹4.90 ಕೋಟಿ ಕಾಮಗಾರಿಗೆ ಚಾಲನೆ

ಹುಲಸೂರ,ಮೇ.24-

'ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಮೂಲಸೌಕರ್ಯ ವೃದ್ಧಿ ಅಗತ್ಯವಾಗಿದ್ದು, ಗ್ರಾಮಸ್ಥರ ಬಹುಕಾಲದ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲಾಗುತ್ತಿದೆ' ಎಂದು ಬಸವಕಲ್ಯಾಣ ಶಾಸಕ ಶರಣು ಸಲಗರ ಹೇಳಿದರು.

ತಾಲ್ಲೂಕಿನ ಕೋಟಮಾಳ ಗ್ರಾಮದಲ್ಲಿ ಮುಖ್ಯಮಂತ್ರಿ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಕೋಟಮಾಳ ಗ್ರಾಮದಿಂದ ಮಹಾರಾಷ್ಟ್ರ ಗಡಿಯವರೆಗೆ ಸುಮಾರು ₹4.50 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿ ಡಾಂಬರೀಕರಣ, ಕೆಕೆಆರ್‌ಡಿಬಿ ಅನುದಾನದಲ್ಲಿ ₹40 ಲಕ್ಷ ವೆಚ್ಚದಲ್ಲಿ ಗ್ರಾಮದ ಸಿ.ಸಿ. ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಯಿಂದ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಅಭಿವೃದ್ಧಿ ಕಾಮಗಾರಿಗಳಲ್ಲಿ ಯಾವುದೇ ರಾಜಿ ಇಲ್ಲದೆ ಗುಣಮಟ್ಟ ಕಾಪಾಡಬೇಕು. ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ ಎಂದರು.

ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಪ್ರತಿದಿನ ಗ್ರಾಮಗಳಿಗೆ ಭೇಟಿ ನೀಡುತ್ತಿದ್ದೇನೆ. ಅನೇಕ ಹಳ್ಳಿಗಳಲ್ಲಿ ರೈತರಿಗೆ ಹೊಲಗಳಿಗೆ ತೆರಳಲು ಸಮರ್ಪಕ ರಸ್ತೆ ಸೌಲಭ್ಯ ಇಲ್ಲದಿರುವುದು ಹಾಗೂ ವಿದ್ಯುತ್ ಸಮಸ್ಯೆಯಿಂದ ತೊಂದರೆ ಅನುಭವಿಸುತ್ತಿರುವುದು ಗಮನಕ್ಕೆ ಬಂದಿದೆ. ಈ ಕುರಿತು ವಿಧಾನಸಭೆಯಲ್ಲಿಯೂ ರೈತರ ಪರವಾಗಿ ಧ್ವನಿ ಎತ್ತಿದ್ದೇನೆ ಎಂದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಕೆಕೆಆರ್‌ಡಿಬಿ ಅನುದಾನದಲ್ಲಿ ಆಗಸ್ಟ್ ತಿಂಗಳಲ್ಲಿ ಕೋಟಮಾಳದಿಂದ ಮಿರಖಲ್‌ವರೆಗೆ ಡಾಂಬರೀಕರಣ ರಸ್ತೆ ಕಾಮಗಾರಿಗೂ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಪ್ರಮುಖರಾದ ಓಂ ಪಾಟೀಲ, ಪ್ರದೀಪ್ ಗಡವಂತೆ, ಶಿವರಾಜ ನರಶೆಟ್ಟಿ, ಶಿವಾಜಿ ಪಾಟೀಲ, ಭಿಕಾಜಿ ಶಿಂದೆ, ಭೀಮರಾವ್ ಶಿಂದೆ, ಮಾರುತಿ ಪಾಟೀಲ, ವೆಂಕಟ್ ಶಿಂದೆ, ಕಲ್ಯಾಣರಾವ್ ಕುಲಕರ್ಣಿ, ಅರ್ಜುನ್ ಲಂಬೆ, ನಾಗೇಶ್ ಮದನೇ, ಸತ್ಯವಾನ್ ಶಿಂದೆ, ರಾಜಪ್ಪ ಹಲಿಂಗೆ, ಮಾದವ ಬಿರಾದಾರ, ಸುನಿಲ್ ಪಾಟೀಲ, ಪ್ರಶಾಂತ್ ಬಿರಾದಾರ, ದೀಪಕ್ ತೆಲಂಗ, ದತ್ತ ಶಿಂದೆ, ವೆಂಕಟ್ ಲಂಬೆ, ವಸಂತ್ ಶಿಂದೆ, ಮನೋಹರ್ ಚೀತಲೇ, ಗುಂಡೆರಾವ್ ಭೋಸಲೇ, ಮಹದೇವ್ ಯವಲೇ, ಹಂಶರಾಜ್ ಶಿಂದೆ ಉಪಸ್ಥಿತರಿದ್ದರು.

ಸಂಸ್ಕೃತಿ ಶ್ರೀಮಂತವಾಗಲು ಹಳ್ಳಿಗಳೇ ಕಾರಣ



ಬೀದರ್,ಮೇ.24-

ಕರ್ನಾಟಕ ಪಂಚಶೀಲ ಸಾಹಿತ್ಯ ಕಲಾ ಸಮಿತಿ ಬೀದರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 2025-26ನೇ ಸಾಲಿನ ಸಾಮಾನ್ಯ ಸಂಘ ಸಂಸ್ಥೆಗಳ ಧನ ಸಹಾಯ ಯೋಜನೆಯಡಿ ಜಿಲ್ಲಾಮಟ್ಟದ ಸಂಗೀತೋತ್ಸವ, ಜಾನಪದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕಲಾವಿದರ ಸನ್ಮಾನ ಕಾರ್ಯಕ್ರಮ ಇತ್ತೀಚೆಗೆ ನಗರದ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಜರುಗಿತು.

ವಕೀಲ ಖಾಜಾ ಕಲೀಂ ಉಲ್ಲಾ ಮಾತನಾಡಿ, ನಮ್ಮ ದೇಶ ಹಳ್ಳಿಗಳನ್ನು ಹೊಂದಿರುವ ನಾಡಾಗಿದ್ದು, ನಮ್ಮ ಸಂಸ್ಕೃತಿ ಶ್ರೀಮಂತವಾಗಲು ಹಳ್ಳಿಗಳೇ ಕಾರಣ. ಆದರೆ, ಇಂದು ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಸಂಸ್ಕೃತಿ ನಾಶವಾಗುತ್ತಿದೆ. ಸಂಬಂಧಗಳು ಒಡೆದು ಹೋಗುತ್ತಿವೆ. ಮುಂದೊಂದು ದಿನ ಪ್ರಾಣಿ ಪಕ್ಷಿಗಳನ್ನು ವೀಕ್ಷಿಸಲು ಮೃಗಾಲಯಗಳಿಗೆ ಹೋಗುವಂತೆ ಅಜ್ಜ-ಅಜ್ಜಿಯರನ್ನು ನೋಡಲು ಹಳ್ಳಿಗಳಿಗೆ ಹೋಗುವ ಕಾಲ ಬರಬಹುದು ಎಂದು ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಂಜುಕುಮಾರ ಅತಿವಾಳೆ ಮಾತನಾಡಿ, ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡುವ ಮೂಲಕ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ರಕ್ಷಣೆ ಹಾಗೂ ಬೆಳವಣಿಗೆಗೆ ಸಹಕಾರಿಯಾಗುತ್ತಿದೆ ಎಂದರು.

ಭಂತೆ ಧಮ್ಮಕರ್ತ ಪಂಚಶೀಲ ಬೋಧಿಸಿದರು. ಸಿದ್ದಾರ್ಥ ಕಾಂಚೆ ರಚಿಸಿದ ಕೆ-ಸೆಟ್ ಪುಸ್ತಕ ಬಿಡುಗಡೆಗೊಳಿಸಲಾಯಿತು. 30 ಜನ ಕಲಾವಿದರನ್ನು ಸನ್ಮಾನಿಸಲಾಯಿತು. ಲಕ್ಷ್ಮಣ ಕಾಂಚೆ ಅಧ್ಯಕ್ಷತೆ ವಹಿಸಿದ್ದರು.

ವಕೀಲ ಬಿ. ಕೃಷ್ಣಪ್ಪ, ಪ್ರಾಧ್ಯಾಪಕ ರಾಜಕುಮಾರ ಅಲ್ಲೂರೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಮಾರುತಿ ಬೌದ್ಧೆ, ಬಿ.ಎಸ್.ಐ ಜಿಲ್ಲಾಧ್ಯಕ್ಷ ರಾಜಪ್ಪ ಗುನ್ನಳ್ಳಿಕರ್, ಆರ್.ಪಿ.ಐ. (ಅಂಬೇಡ್ಕರ್) ರಾಜ್ಯ ಸಂಯೋಜಕ ಮಹೇಶ್ ಗೋರನಾಳಕರ್, ರೇಖಾ ಕಾಂಚೆ ಉಪಸ್ಥಿತರಿದ್ದರು. ಜೈಶೀಲಾ ಜ್ಯೋತಿ ವಾಲದೊಡ್ಡಿ ಅಂಬೇಡ್ಕರ್ ಗೀತೆ ಹಾಡಿದರು. ಅಶೋಕ ಸಂಗೋಳಗಿ ಜಾನಪದ ಗೀತೆ ಹಾಡಿದರು. ಶಂಕರರಾವ್ ಹಿಪ್ಪಳಗಾಂವ್ ಹಾಗೂ ಸಂಗಡಿಗರು, ಶಿವಾಜಿ ಮಾನಕಾರೆ ಸಂಗಡಿಗರು ಕ್ರಾಂತಿ ಗೀತೆ ಹಾಡಿದರು. ಜೋಗುಳ ಪದಗಳನ್ನು ಸರಸ್ವತಿ ಸಾಂಗಳೆ ಹಾಗೂ ಸಂಗಡಿಗರು, ಮೊಹರಂ ಭುಲಾಯಿ ಪದಗಳನ್ನು ದಶರಥ ಚಾಂಬೋಳಕರ್ ಹಾಗೂ ಸಂಗಡಿಗರು, ಅಂಬೇಡ್ಕರ್ ಭಜನೆಗಳನ್ನು ದಿಲೀಪ್ ಸರ್ಸೆ ಹಾಗೂ ಸಂಗಡಿಗರು, ಶಿವ ಭಜನೆಗಳನ್ನು ಸಂತೋಷ ದೇಶಮುಖ ಗೋರನಾಳ ಹಾಗೂ ಸಂಗಡಿಗರು, ಭೀಮ ಗೀತೆಗಳನ್ನು ಚಂದ್ರಮ್ಮ ನಾಗಂಪಲ್ಲಿ ಹಾಗೂ ಸಂಗಡಿಗರು ಪ್ರಸ್ತುತಪಡಿಸಿದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಸೂರ್ಯಕಾಂತ ಬಡಿಗೇರ್ ಸ್ವಾಗತಿಸಿದರು. ಅಂಬಾದಾಸ್ ಗಾಯಕವಾಡ್ ನಿರೂಪಿಸಿದರು. ಅರ್ಜುನ ಕಾಂಚೆ ವಂದಿಸಿದರು.

ಜಿಲ್ಲೆಯಲ್ಲಿ ಕಾರ್ಯನಿರ್ವಹಣೆ; ತೃಪ್ತಿಯಿದೆ

ಕಲಬುರಗಿ,ಮೇ.24-

'ಜಿಲ್ಲೆಯ ಅಭಿವೃದ್ಧಿಗೆ ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ತಂಡದ ರೂಪದಲ್ಲಿ ಕಾರ್ಯನಿರ್ವ ಹಿಸಿದ ತೃಪ್ತಿ ಇದೆ' ಎಂದು ಜಿ.ಪಂ ನಿರ್ಗಮಿತ ಸಿಇಒ ಭಂವರ್ ಸಿಂಗ್ ಮೀನಾ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿ ಮುಂಬಡ್ತಿ ಪಡೆದು ವರ್ಗಾವಣೆಗೊಂಡಿದ್ದರಿಂದ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಮೂರು ವರ್ಷ ಸುದೀರ್ಘವಾಗಿ ಗ್ರಾಮೀಣ ಜನರ ಸೇವೆ ಸಲ್ಲಿಸುವ ಸೌಭಾಗ್ಯ ಸಿಕ್ಕಿತ್ತು ಎಂದರು.

ಕಲಬುರಗಿ ದೊಡ್ಡ ಜಿಲ್ಲೆ. ಇಲ್ಲಿ ಕಾರ್ಯನಿರ್ವಹಿಸಿದರೆ, ಬೇರೆಡೆ ಸರಳವಾಗಿ ಕಾರ್ಯನಿರ್ವಹಿಸಬಹುದೆಂಬ ಮಾತಿದೆ. ಅಂತಹ ಒಂದು ಆತ್ಮವಿಶ್ವಾಸ ಇಲ್ಲಿ ಸಿಕ್ಕಿದ್ದು, ಮುಂದಿನ ಸೇವೆಗೆ ಅದು ನೆರವಾಗಲಿದೆ. ನೂತನ ಜಿಲ್ಲಾಧಿಕಾರಿ, ಸಿಇಒ ಅವರಿಗೂ ಅಧಿಕಾರಿಗಳು ಇದೇ ರೀತಿಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ನಂಬಿಕೆಯ ಹೆಸರಿನಲ್ಲಿ ನದಿಗಳಿಗೆ ಕುತ್ತು



ಇತ್ತೀಚೆಗೆ ಮಧ್ಯಪ್ರದೇಶದ ಸಿಹೋರ್ ಜಿಲ್ಲೆಯಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ನರ್ಮದಾ ನದಿಗೆ 11, 000 ಲೀಟರ್ ಹಾಲು ಮತ್ತು 210 ಸೀರೆಗಳನ್ನು ಅರ್ಪಿಸಲಾಯಿತು. ಇಂದು ದೇಶದ ಹಲವೆಡೆ ನದಿಗಳನ್ನು ಪೂಜಿಸುವ ಭಾಗವಾಗಿ ಲೀಟರ್‌ಗಟ್ಟಲೆ ಹಾಲುಗಳನ್ನು ಸುರಿಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದರಿಂದಾಗಿ ಜಲಮೂಲ ಗಂಭೀರ ರೂಪದಲ್ಲಿ ಕಲುಷಿತಗೊಳ್ಳುತ್ತಿದೆ ಎಂದು ಆರೋಪಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಗೆ ದೂರು ನೀಡಲಾಗಿದೆ. ಮಂಡಳಿಯು ಇದಕ್ಕೆ ಸಂಬಂಧಿಸಿ ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಪ್ರತಿಕ್ರಿಯೆಯನ್ನು ಕೋರಿದೆ. ವಿಪರ್ಯಾಸವೆಂದರೆ ಧಾರ್ಮಿಕ ಆಚರಣೆಯ ನೆಪದಲ್ಲಿ ಸರಕಾರದ ನೇತೃತ್ವದಲ್ಲೇ ನದಿಗಳಿಗೆ ಹಾಲು, ಸೀರೆ ಅರ್ಪಿಸುವ ಕೆಲಸಗಳು ನಡೆಯುತ್ತಿರುವುದು ಮತ್ತು ಇದರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಎನ್‌ಜಿಟಿಯು ಹಿಂದೇಟು ಹಾಕುತ್ತಿರುವುದು. ಇಂತಹ ಕಾರ್ಯಕ್ರಮಗಳು ರಾಜಕಾರಣಿಗಳ ಸಹಭಾಗಿತ್ವದಿಂದ ನಡೆಯುವುದರಿಂದ ಮಂಡಳಿಗೆ ಪ್ರಶ್ನಿಸುವುದು ಕಷ್ಟವಾಗುತ್ತದೆ. ಇದೇ ಸಂದರ್ಭದಲ್ಲಿ ಎಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪವನ್ನು ಎದುರಿಸಬೇಕಾಗುತ್ತದೋ ಎನ್ನುವ ಭಯವೂ ಮಂಡಳಿಯನ್ನು ಕಾಡುತ್ತದೆ.

ಅತಿ ಹೆಚ್ಚು ನದಿಗಳನ್ನು ಹೊಂದಿರುವ ಹೆಗ್ಗಳಿಕೆಯನ್ನು ಭಾರತ ಹೊಂದಿದೆ. ಅದರ ಜೊತೆ ಜೊತೆಗೇ ಭಾರತದ ಬಹುತೇಕ ನದಿಗಳ ನೀರು ಕುಡಿಯುವುದಕ್ಕೆ ಅರ್ಹವಲ್ಲ ಎನ್ನುವ ಪ್ರಮಾಣ ಪತ್ರವನ್ನು ಪಡೆದುಕೊಂಡಿದೆ. ಭಾರತೀಯರ ಪಾಲಿಗೆ ಪರಮಪವಿತ್ರವಾಗಿರುವ ಗಂಗಾನದಿಯು ಜಗತ್ತಿನ ಅತ್ಯಂತ ಕಲುಷಿತ ನದಿಗಳಲ್ಲಿ ಒಂದು ಎಂದು ಕುಖ್ಯಾತಿಯನ್ನು ಪಡೆದಿದೆ. ಗಂಗಾನದಿಯ ಒಟ್ಟು ಮಾಲಿನ್ಯಕ್ಕೆ ಶೇ. 70ರಿಂದ 80ರಷ್ಟು ಕಾರಣ ನಗರಗಳ ಕೊಳಚೆ ಮತ್ತು ಸಾಬೂನು ಮಿಶ್ರಿತ ತ್ಯಾಜ್ಯವಾಗಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಯನಗಳ ಪ್ರಕಾರ ಗಂಗಾ ನದಿಯ ತೀರದಲ್ಲಿರುವ ಪ್ರಮುಖ ನಗರಗಳಿಂದ ಪ್ರತಿದಿನ ಸುಮಾರು 6,000 ಮಿಲಿಯನ್ ಲೀಟರ್‌ಗಳಿಗಿಂತಲೂ ಹೆಚ್ಚು ಸಂಸ್ಕರಿಸದ ಅಥವಾ ಭಾಗಶಃ ಸಂಸ್ಕರಿಸಿದ ಕೊಳಚೆ ನೀರು ನೇರವಾಗಿ ನದಿಯನ್ನು ಸೇರುತ್ತದೆ. ಸುಮಾರು 3,000 ಮಿಲಿಯನ್ ಲೀಟರ್ ಕಲುಷಿತ ನೀರು ಪ್ರತಿದಿನ ಯಾವುದೇ ಸಂಸ್ಕರಣೆಯಿಲ್ಲದೆ ನೇರವಾಗಿ ಗಂಗೆಯ ಒಡಲು ಸೇರುತ್ತಿದೆ. ಗಂಗಾ ನದಿ ಪಾತ್ರದಲ್ಲಿರುವ ಸುಮಾರು 1,100ಕ್ಕೂ ಹೆಚ್ಚು ಕೈಗಾರಿಕೆಗಳಿಂದ ಸುಮಾರು 500 ಮಿಲಿಯನ್ ಲೀಟರ್ ರಾಸಾಯನಿಕ ಮಿಶ್ರಿತ ವಿಷ ತ್ಯಾಜ್ಯ ನದಿಗೆ ಹರಿಯುತ್ತದೆ. ಉತ್ತರ ಪ್ರದೇಶದ ಕಾನ್ಪುರದ ಚರ್ಮದ ಕಾರ್ಖಾನೆಗಳು ಬಣ್ಣದ ಕಾರ್ಖಾನೆಗಳು ಕಾಗದದ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು ಮತ್ತು ರಾಸಾಯನಿಕ ಉದ್ಯಮಗಳು ಕ್ರೋಮಿಯಂ, ಸೀಸ, ಪಾದರಸ, ಆರ್ಸೆನಿಕ್‌ನಂತಹ ಭೀಕರ ರಾಸಾನಿಯಕಗಳನ್ನು ನದಿಗೆ ಬಿಡುತ್ತಿವೆ. ಜಗತ್ತಿನಲ್ಲೇ ಕಡಲಿಗೆ ಅತಿ ಹೆಚ್ಚು ಪ್ಲಾಸ್ಟಿಕ್ ಕಸವನ್ನು ಹೊತ್ತೊಯ್ಯುವ ಮೊದಲ 10 ನದಿಗಳಲ್ಲಿ ಗಂಗಾ ನದಿಯೂ ಒಂದಾಗಿದೆ. ಯಮುನಾ ನದಿಯಲ್ಲಿ ಆಮ್ಲಜನಕದ ಪ್ರಮಾಣ ಶೂನ್ಯಕ್ಕೆ ತಲುಪುತ್ತಿದೆ. ಈ ನದಿಯ ಮೇಲೆ ವಿಷಕಾರಿ ಬಿಳಿನೊರೆ ತೇಲುತ್ತಿರುವುದು ಜಗತ್ತಿನಾದ್ಯಂತ ಈಗಾಗಲೇ ಸುದ್ದಿಯಾಗಿದೆ.

ಸಾಧಾರಣವಾಗಿ ಧಾರ್ಮಿಕ ಕಾರಣಗಳಿಗಾಗಿ ನದಿಯನ್ನು ಕಲುಷಿತಗೊಳಿಸುವ ಜನರು ಕಾರ್ಖಾನೆಗಳಿಂದ ನದಿಗಳಿಗೆ ಹರಿಯುವ ತ್ಯಾಜ್ಯಗಳನ್ನು ತೋರಿಸಿ ತಮ್ಮ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಾರೆ. ನದಿಗಳಿಗೆ ಹಾಲು, ಸೀರೆ ಅರ್ಪಿಸುವುದರಿಂದ ನದಿ ಕಲುಷಿತವಾಗುತ್ತದೆ ಎಂದು ಹೇಳಿದರೆ, ಸಾವಿರಾರು ಕಾರ್ಖಾನೆಗಳಿಂದ ಹರಿಯುವ ತ್ಯಾಜ್ಯಗಳನ್ನು ಮೊದಲು ನಿಲ್ಲಿಸಿ ಎಂದು ತರಾಟೆಗೆ ತೆಗೆದುಕೊಳ್ಳುತ್ತಾರೆ. ಆದರೆ, ನದಿಗಳ ವಿಷಯದಲ್ಲಿ ಧಾರ್ಮಿಕ ವ್ಯಕ್ತಿಗಳಿಗೆ ಹೆಚ್ಚು ಹೊಣೆಗಾರಿಕೆಗಳಿವೆ ಎನ್ನುವುದನ್ನು ಈ ಸಂದರ್ಭದಲ್ಲಿ ಮರೆಯುತ್ತಾರೆ. ಕಾರ್ಖಾನೆಗಳ ಹಿಂದಿರುವವರಿಗೆ ತಮ್ಮ ಸ್ವಾರ್ಥ, ಲಾಭಗಳನ್ನು ಹೊರತು ಪಡಿಸಿದರೆ ನದಿಗಳ ಕುರಿತಂತೆ ಯಾವುದೇ ಕಾಳಜಿಗಳಿಲ್ಲ. ಆದರೆ ಧಾರ್ಮಿಕ ವ್ಯಕ್ತಿಗಳಿಗೆ ನದಿಗಳ ಜೊತೆಗೆ ಭಾವನಾತ್ಮಕ ಸಂಬಂಧವಿದೆ. ನದಿಯಲ್ಲಿ ತಾಯಿಯನ್ನು ಕಾಣುವ, ದೇವತೆಗಳನ್ನು ಕಾಣುವ ದೇಶ ನಮ್ಮದು. ಭಾರತದ ಬಹುತೇಕ ನಾಗರಿಕತೆಗಳು ಅರಳಿದ್ದು ನದೀ ಪಾತ್ರಗಳಲ್ಲಿ. ನದಿಗಳ ಮಹತ್ವವನ್ನು ಅರಿತ ಕಾರಣದಿಂದಲೇ ನಮ್ಮ ಹಿರಿಯರು ನದಿಗಳಲ್ಲಿ ದೇವತೆಗಳನ್ನು ಕಂಡರು. ಅವುಗಳನ್ನು ಪವಿತ್ರವಾಗಿ ಉಳಿಸುವ ಸದುದ್ದೇಶ ಅದರ ಹಿಂದಿತ್ತು. ಆದರೆ ಇಂದು, ನದಿಗಳು ದೇವತಾಸ್ಥಾನಕ್ಕೇರಿರುವುದೇ ಅವುಗಳ ಪಾಲಿಗೆ ಮುಳುವಾಗಿದೆ. ಸ್ವರ್ಗ, ಮೋಕ್ಷದ ಉದ್ದೇಶದಿಂದ ನದಿ ಪಾತ್ರಗಳಲ್ಲಿ ಶವ ಸಂಸ್ಕಾರ ನಡೆಸಿ ನದಿಗಳಿಗೆ ತೇಲಿ ಬಿಡುವ ಪ್ರವೃತ್ತಿಗಳು ಇನ್ನೂ ನಿಂತಿಲ್ಲ. ಗಂಗಾ ನದಿಯನ್ನು ಅತ್ಯಂತ ಪವಿತ್ರವೆಂದು ಭಾವಿಸುವುದರಿಂದ ಅದರ ತೀರದಲ್ಲಿ ವರ್ಷಕ್ಕೆ ಸುಮಾರು 30,000ಕ್ಕೂ ಹೆಚ್ಚು ಶವಗಳ ದಹನಕ್ರಿಯೆಗಳು ನಡೆಯುತ್ತವೆ. ಭಾಗಶಃ ಸುಟ್ಟ ಶವಗಳು, ಚಿತಾಭಸ್ಮದ ಟನ್‌ಗಟ್ಟಲೆ ಬೂದಿ ಪ್ರತಿವರ್ಷ ನದಿ ನೀರನ್ನು ಸೇರುತ್ತವೆ. ನಮಾಮಿ ಗಂಗಾ ಯೋಜನೆಯನ್ನು ಹಮ್ಮಿಕೊಂಡು ಗಂಗೆಯನ್ನು ಶುಚಿಗೊಳಿಸುವ ಸಂದರ್ಭದಲ್ಲಿ ಸಾವಿರಾರು ಅಸ್ಥಿಪಂಜರಗಳನ್ನು ಗಂಗೆಯ ಒಡಲಿಂದ ತೆಗೆದು ಹಾಕಲಾಯಿತು. ಇವೆಲ್ಲವನ್ನು ಎಸಗಿರುವುದು ನದಿಯ ಮೇಲಿನ ಗೌರವದಿಂದ ಎನ್ನುವುದು ವಿಪರ್ಯಾಸವಾಗಿದೆ. ಭಕ್ತಿಯ ಹೆಸರಿನಲ್ಲಿ ನಾವು ಪವಿತ್ರವೆಂದು ಪೂಜಿಸುವ ನದಿಗಳನ್ನು ಅಪವಿತ್ರಗೊಳಿಸುತ್ತಿದ್ದೇವೆ ಎನ್ನುವ ಪ್ರಜ್ಞೆಯನ್ನು ಭಕ್ತಾದಿಗಳಿಗೆ ಮೂಡಿಸುವ ಕೆಲಸ ಧಾರ್ಮಿಕ ಮುಖಂಡರಿಂದ ನಡೆಯಬೇಕಾಗಿದೆ. ಆದರೆ ಇಂದು ದುರದೃಷ್ಟವಶಾತ್, ಅವರೇ ಇದರ ನೇತೃತ್ವವನ್ನು ವಹಿಸಿದ್ದಾರೆ.

ಸಾವಿರಾರು ಲೀಟರ್ ಹಾಲನ್ನು ನದಿಗೆ ಸುರಿಯುವುದಕ್ಕಿಂತ ಅವುಗಳನ್ನು ಸಾಂಕೇತಿಕವಾಗಿ ನದಿಗೆ ಅರ್ಪಿಸಿ ಉಳಿದ ಹಾಲನ್ನು ಬಡವರ ಮಕ್ಕಳಿಗೆ ನೀಡಲು ಧಾರ್ಮಿಕ ಮುಖಂಡರು ಪ್ರೇರೇಪಿಸಬೇಕು. ಈ ಕೆಲಸವನ್ನು ಸರಕಾರವೋ, ಪರಿಸರ ಸಂಸ್ಥೆಗಳೋ ಮಾಡುವುದಕ್ಕಾಗುವುದಿಲ್ಲ. ಭಾರತ ಅತಿ ಹೆಚ್ಚು ಹಾಲು ಉತ್ಪಾದಿಸುವ ದೇಶವಾಗಿದ್ದರೂ, ಅಪೌಷ್ಟಿಕತೆ ಪ್ರಮಾಣ ಕಳವಳಕಾರಿ ಮಟ್ಟದಲ್ಲಿದೆ. ಅಪೌಷ್ಟಿಕತೆಯ ಕಾರಣದಿಂದ ಭಾರತದಲ್ಲಿ 5 ವರ್ಷದೊಳಗಿನ ಸುಮಾರು ಶೇ. 2.5ರಷ್ಟು ಮಕ್ಕಳು ವಯಸ್ಸಿಗೆ ತಕ್ಕ ಎತ್ತರವಿಲ್ಲದೆ ಬಳಲುತ್ತಿದ್ದಾರೆ. ದೇಶದ ಶೇ. 50ಕ್ಕಿಂತ ಹೆಚ್ಚು ಗರ್ಭಿಣಿಯರು ಮತ್ತು ಮಹಿಳೆಯರು ಹಾಗೆಯೇ ಮಕ್ಕಳು ತೀವ್ರ ರಕ್ತಹೀನತೆಯಿಂದ ನರಳುತ್ತಿದ್ದಾರೆ. ಭಾರತದಲ್ಲಿ ಸದ್ಯಕ್ಕೆ ಒಬ್ಬ ವ್ಯಕ್ತಿಗೆ ದಿನಕ್ಕೆ ಸರಾಸರಿ 450 ಗ್ರಾಂಗಿಂತ ಹೆಚ್ಚು ಹಾಲು ಲಭ್ಯವಿದೆ. ಆದರೆ ಬಡತನ ರೇಖೆಗಿಂತ ಕೆಳಗಿರುವ ಕೋಟ್ಯಂತರ ಮಕ್ಕಳಿಗೆ ಹಾಲನ್ನು ಕೊಂಡು ಕುಡಿಯುವ ಶಕ್ತಿಯಿಲ್ಲ. ಒಂದೆಡೆ ಹಾಲನ್ನು ನದಿಗೆ ಸುರಿದು ನದಿಯನ್ನು ಕಲುಷಿತಗೊಳಿಸಲಾಗುತ್ತದೆಯಾದರೆ, ಮತ್ತೊಂದೆಡೆ ಹಸಿದ ಮಕ್ಕಳು ಕುಡಿಯಬೇಕಾಗಿದ್ದ ಹಾಲನ್ನು ವ್ಯರ್ಥ ಮಾಡಲಾಗುತ್ತಿದೆ. ಇವೆರಡನ್ನೂ ಯಾವುದೇ ಧರ್ಮ ಒಪ್ಪುವುದಕ್ಕೆ ಸಾಧ್ಯವಿಲ್ಲ. ಮೊದಲು ಈ ದೇಶದಲ್ಲಿ ಧರ್ಮದ ಹೆಸರಿನಲ್ಲಿ ನದಿಗಳನ್ನು ಕಲುಷಿತಗೊಳಿಸುವ ಮತ್ತು ತಿನ್ನುವ ಆಹಾರವನ್ನು ವ್ಯರ್ಥಗೊಳಿಸುವ ಕೃತ್ಯಗಳಿಗೆ ಕಡಿವಾಣ ಹಾಕಬೇಕಾಗಿದೆ. ಆದರೆ ಇದು ನಂಬಿಕೆಗೆ ಸಂಬಂಧಿಸಿದ ವಿಷಯವಾಗಿರುವುದರಿಂದ ಸರಕಾರ ಹಸ್ತಕ್ಷೇಪ ಮಾಡುವುದಕ್ಕಿಂತ ಆಯಾ ಧಾರ್ಮಿಕ ಮುಖಂಡರೇ ಜನರಲ್ಲಿ ಜಾಗೃತಿ ಮೂಡಿಸುವುದಕ್ಕೆ ಮುಂದಾಗಬೇಕಾಗಿದೆ. ಇದು ಕೇವಲ ಪರಿಸರ ಮತ್ತು ಆಹಾರಕ್ಕೆ ಸಂಬಂಧಿಸಿದ ಜಾಗೃತಿ ಮಾತ್ರವಲ್ಲ, ಪರೋಕ್ಷವಾಗಿ ಧಾರ್ಮಿಕ, ಆಧ್ಯಾತ್ಮಿಕ ಜಾಗೃತಿಯೂ ಹೌದು.

ಕಪೂರ್ತಲಾ ಜೈಲಿನಲ್ಲಿ ಘರ್ಷಣೆ: ಮೂವರಿಗೆ ಗಾಯ, ಅಶ್ರುವಾಯು ಪ್ರಯೋಗಿಸಿ ಲಾಠಿಚಾರ್ಜ್

ಚಂಡೀಗಢ,ಮೇ.24:

ಪಂಜಾಬ್‌ನ ಕಪೂರ್ತಲಾ ಜೈಲಿನಲ್ಲಿ ಕೈದಿಗಳ ನಡುವೆ ನಡೆದ ಗಲಾಟೆ ಘರ್ಷಣೆಗೆ ತಿರುಗಿದ ಬಳಿಕ ಪರಿಸ್ಥಿತಿ ನಿಯಂತ್ರಿಸಲು ಅಧಿಕಾರಿಗಳು ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸಿ ಲಾಠಿಚಾರ್ಜ್ ನಡೆಸಿದ್ದಾರೆ. ಈ ಘಟನೆಯಲ್ಲಿ ಲಾಠಿಚಾರ್ಜ್ ವೇಳೆ ಇಬ್ಬರು ಕೈದಿಗಳಿಗೆ ಗಾಯಗಳಾಗಿದ್ದು, ಮತ್ತೊಬ್ಬ ಕೈದಿಗೆ ಅಶ್ರುವಾಯು ಶೆಲ್ ತಗುಲಿ ಗಾಯವಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ತಡರಾತ್ರಿ ಜೈಲಿನ ಬ್ಲಾಕ್-4ರಲ್ಲಿ ಕೆಲ ಕೈದಿಗಳ ನಡುವೆ ಯಾವುದೋ ವಿಷಯಕ್ಕೆ ಸಂಬಂಧಿಸಿ ಜಗಳ ಆರಂಭವಾಗಿದೆ.ಅಧು ನಂತರ ಘರ್ಷಣೆಗೆ ತಿರುಗಿದೆ.

ಜೈಲು ಅಧಿಕಾರಿಗಳು ಪರಿಸ್ಥಿತಿ ಶಾಂತಗೊಳಿಸಲು ಮಧ್ಯಪ್ರವೇಶಿಸಿದರೂ, ಕೆಲವು ಕೈದಿಗಳು ಅಧಿಕಾರಿಗಳೊಂದಿಗೆ ತಳ್ಳಾಟ ನಡೆಸಲು ಮುಂದಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೆಲ ಕೈದಿಗಳು ಬ್ಯಾರಕ್‌ನಿಂದ ಹೊರಬಂದು ಮೇಲ್ಛಾವಣಿಗೆ ಏರಿದ್ದು, ಕೆಲವರು ಬಟ್ಟೆಗಳಿಗೆ ಬೆಂಕಿ ಹಚ್ಚಿದ್ದಾರೆ ಎನ್ನಲಾಗಿದೆ. ಘಟನೆಯ ಬಳಿಕ ಭಾರೀ ಪ್ರಮಾಣದ ಪೊಲೀಸ್ ಪಡೆ ನಿಯೋಜಿಸಲಾಗಿದೆ.

ಕನ್ನಡಿಗರೇ ಗಮನಿಸಿ: ನಿಮ್ಮ ಗ್ಯಾರಂಟಿ ಯೋಜನೆ, ಸರ್ಕಾರಿ ಸೌಲಭ್ಯಗಳನ್ನೂ ಕಸಿದುಕೊಳ್ಳುತ್ತದೆ 'ಎಸ್‌ಐಆರ್'

ಕರ್ನಾಟಕದಲ್ಲಿ ಎಸ್‌ಐರ್ಆ ಗೊಂದಲದಿಂದ ವೋಟರ್ ಐಡಿ ರದ್ದಾದರೆ, ಮತದಾನದ ಹಕ್ಕು ಕಳೆದುಕೊಳ್ಳುವ ಬಡ ನಾಗರಿಕರು ಪಡಿತರ ಚೀಟಿ, ಶಕ್ತಿ ಮತ್ತು ಗೃಹಲಕ್ಷ್ಮಿ ಯೋಜನೆ, ವೃದ್ಧಾಪ್ಯ ಪಿಂಚಣಿ, ವಿಧವಾ ವೇತನದಂತಹ ಸೌಲಭ್ಯಗಳಿಂದಲೂ ವಂಚಿತರಾಗುತ್ತಾರೆ.

ಮತದಾನದ ಹಕ್ಕನ್ನು ಕಸಿದುಕೊಳ್ಳುವ ಮೂಲಕ ದುರ್ಬಲ ವರ್ಗದವರ ಧ್ವನಿಯನ್ನು ಅಡಗಿಸುವ ವ್ಯವಸ್ಥಿತ ಸಂಚು ನಡೆಯುತ್ತಿದೆ. ತಳ ಸಮುದಾಯಗಳ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಗೆ ಧಕ್ಕೆ ತರುವ ರಾಜಕೀಯ ಪಿತೂರಿ ನಡೆಯುತ್ತಿದ್ದು, ರಾಜ್ಯದ ಸಾಮಾನ್ಯ ನಾಗರಿಕರು ತಮ್ಮ ಅತ್ಯಂತ ಪವಿತ್ರವಾದ ಮತದಾನದ ಹಕ್ಕು ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಗ್ಯಾರಂಟಿ ಯೋಜನೆಗಳ ಸೌಲಭ್ಯಗಳನ್ನು ಕಳೆದುಕೊಳ್ಳುವ ಭೀತಿ ಎದುರಾಗಿದೆ ಇದು ಎಸ್‌ಐರ್ಆ ಕುರಿತು ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಕಳವಳ.

ಡಿ.ಕೆ ಶಿವಕುಮಾರ್ ಅವರು ಈ ಮಾತುಗಳು ಕೇವಲ ಒಂದು ರಾಜಕೀಯ ಹೇಳಿಕೆಯಲ್ಲ. ಮೋದಿ-ಶಾ ಜೋಡಿಯ ಕುತಂತ್ರಗಳಿಗೆ ಕೈಜೋಡಿಸಿ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ನಿಂದಾಗುವ ಪರಿಣಾಮಗಳ ಕುರಿತಾದ ಎಚ್ಚರಿಕೆ.

ಎಸ್‌ಐಆರ್ ಮೂಲಕ ನಕಲಿ ಮತದಾರರನ್ನು ಹೊರಹಾಕುತ್ತೇವೆಂದು ಬಾಯಿ ಮಾತಿಗೆ ಹೇಳುತ್ತಿರುವ ಚುನಾವಣಾ ಆಯೋಗ, ಈವರೆಗೆ 13 ರಾಜ್ಯಗಳಲ್ಲಿ ಸುಮಾರು 5.5 ಕೋಟಿ ನೈಜ ಮತದಾರರನ್ನೇ ಮತಪಟ್ಟಿಯಿಂದ ಹೊರಹಾಕಿದೆ. ಇವರಲ್ಲಿ, ಹೆಚ್ಚಿನವರು ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ಆರ್ಥಿಕವಾಗಿ ಹಿಂದುಳಿದ ಬಡವರು. ಈ ಬೃಹತ್ ಸಂಖ್ಯೆಯ ಭಾರತೀಯರು ತಮ್ಮ ಅತ್ಯುನ್ನತ ಸಂವಿಧಾನಿಕ ಹಕ್ಕಾದ ಮತದಾನದ ಹಕ್ಕು ಕಳೆದುಕೊಂಡಿದ್ದಾರೆ.

ವಿಶೇಷವಾಗಿ, ಬಂಗಾಳದಲ್ಲಿ ಕೃತಕ ಬುದ್ಧಮತ್ತೆ () ಆಧಾರಿತ ಇರೋನೆಟ್‌ಸಾಫ್ಟ್‌ವೇರ್ ಬಳಸಿ, ತಾಂತ್ರಿಕ ವ್ಯತ್ಯಾಸದ ( ) ಹೆಸರಿನಲ್ಲಿನ ಸಣ್ಣಪುಟ್ಟ ಸ್ಪೆಲ್ಲಿಂಗ್ ವ್ಯತ್ಯಾಸಗಳ ಕಾರಣಕ್ಕಾಗಿ ಲಕ್ಷಾಂತರ ಬಡವರು, ಹಿಂದುಳಿದವರು ಹಾಗೂ ಮುಸ್ಲಿಮರನ್ನು ಮತದಾನದಿಂದ ವಂಚಿತಗೊಳಿಸಲಾಗಿದೆ. ಈ ಪ್ರಕ್ರಿಯೆ ಎಷ್ಟು ದಾರ್ಷ್ಟ್ಯದಿಂದ ಕೂಡಿದೆಯೆಂದರೆ, ಭಾರತದ ಹೆಮ್ಮೆಯ ನೋಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್ ಅವರಿಗೇ ತಮ್ಮ ಪೌರತ್ವವನ್ನು ಸಾಬೀತು ಮಾಡುವಂತೆ ಆಯೋಗ ನೋಟಿಸ್ ಕಳಿಸಿತ್ತು.

ಈಗ, ಕರ್ನಾಟಕವು ಸೇರಿದಂತೆ 16 ರಾಜ್ಯಗಳಲ್ಲಿ ಎಸ್‌ಐಆರ್ ಆರಂಭವಾಗುತ್ತಿದೆ. ಜೂನ್ 30ರಿಂದ ಕರ್ನಾಟಕದಲ್ಲಿ ಎಸ್‌ಐಆರ್ ಜಾರಿಗೆ ಬರಲಿದೆ. ಈ ಎಸ್‌ಐಆರ್‌ನಲ್ಲಿ ಮತದಾನದ ಹಕ್ಕನ್ನು ಉಳಿಸಿಕೊಳ್ಳುವುದು ಅಷ್ಟು ಸುಲಭವಿಲ್ಲ. ಎಸ್‌ಐಆರ್‌ಗೆ ಒದಗಿಸಬೇಕಾದ ಅಗತ್ಯವಾದ ಡಾಕ್ಯುಮೆಂಟುಗಳು ಇದ್ದರೂ ಹೆಸರಿನಲ್ಲಿನ ಸ್ಪೆಲ್ಲಿಂಗ್, ಅಪ್ಪ ಅಮ್ಮ, ಅಜ್ಜ, ಅಜ್ಜಿಯ ವಯಸ್ಸಿಗೂ ನಿಮ್ಮ ವಯಸ್ಸಿಗೂ ಇರುವ ಅಂತರ, ವಿಳಾಸ, ಹುಟ್ಟಿದ ದಿನಾಂಕದಲ್ಲಿ ಸ್ವಲ್ಪ ಬದಲಾವಣೆ ಕಂಡುಬಂದರೂ, ಗಳು ಅಪ್ಲೋಡ್ ಮಾಡುವಲ್ಲಿ ಒಂದಷ್ಟು ತೊಡಕುಗಳಾದರೂ ಸಾಕು ಆ ಮತದಾರರನ್ನು



ಅನುಮಾನಾಸ್ಪದ ಮತದಾರರು ಎಂದು ಪರಿಗಣಿಸಲಾಗುತ್ತದೆ. ಸೂಕ್ತ ದಾಖಲೆಗಳನ್ನು ಸಲ್ಲಿಸುವಂತೆ ನೋಟೀಸ್ ಕಳಿಸಲಾಗುತ್ತದೆ.

ಅನುಮಾನಾಸ್ಪದ ಮತದಾರರೆಂದು ಪಟ್ಟಿ ಮಾಡಲಾದ ಮತದಾರರು ಚುನಾವಣಾ ಆಯೋಗ ಕೇಳುವ 11 ದಾಖಲೆಗಳಲ್ಲಿ ಒಂದನ್ನಾದರೂ ನೀಡಬೇಕು. ಜನಸಾಮಾನ್ಯರ ಬಳಿ ಸಾಮಾನ್ಯವಾಗಿ ಇರುವ ಓಟರ್ ಕಾರ್ಡ್, ರೇಷನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್‌ಗಳನ್ನು ಗುರುತಾಗಿ ಪರಿಗಣಿಸಲಾಗುವುದಿಲ್ಲ. ಆಧಾರ್ ಕಾರ್ಡ್ ಆಟಕ್ಕುಂಟು ಲೆಕ್ಕಕ್ಕಿಲ್ಲ. ಅವರು ಹೇಳುವುದು ಜನ್ಮ ಪತ್ರ, ಪಾಸ್‌ಪೋರ್ಟ್, ಆಸ್ತಿ ಡಾಕ್ಯುಮೆಂಟ್, ಎಸ್‌ಎಸ್‌ಎಲ್‌ಸಿ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ಶಾಶ್ವತ ಸರ್ಕಾರಿ ಹುದ್ದೆಯಲ್ಲಿದ್ದರೆ ಅದರ ಐಡಿ, ಇತ್ಯಾದಿ ದಾಖಲೆಗಳನ್ನು ನೀಡಬೇಕು. ಇವು ರಾಜ್ಯದ ಕೋಟ್ಯಾಂತರ ಜನರ ಬಳಿ ಲಭ್ಯವಿಲ್ಲ, ಮಾಡಿಸುವುದೂ ಸುಲಭವಲ್ಲ. ಆದ್ದರಿಂದ, ಅತಿ ಹೆಚ್ಚು ಮತದಾರರ ಮತದಾನದ ಹಕ್ಕನ್ನು ಸ್ಥಗಿತಗೊಳಿಸಲಾಗುತ್ತದೆ. ಅಪೀಲ್ ಸಲ್ಲಿಸಲು ಕೇವಲ ಒಂದು ತಿಂಗಳ ಸಮಯವಕಾಶವಿರುತ್ತದೆ. ತದ ನಂತರ ಲಕ್ಷಾಂತರ ಜನರನ್ನು ಡಿಲೀಟ್ ಮಾಡಲಾಗುತ್ತದೆ.

ಒಂದು ವೇಳೆ, ಓಟರ್ ಐಡಿ ರದ್ದಾದರೆ, ಅಂತಹವರು ಮತದಾನದ ಹಕ್ಕು ಕಳೆದುಕೊಳ್ಳುತ್ತಾರೆ. ಮಾತ್ರವಲ್ಲದೆ, ಸರ್ಕಾರಿ ಸೌಲಭ್ಯಗಳೂ ಕೈತಪ್ಪಲಿವೆ. ಈಗಾಗಲೇ ಅಂತಹ ವಿದ್ಯಮಾನಗಳು ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಚುನಾವಣೆ ನಂತರ ನಡೆಯುತ್ತಿವೆ. ಎಸ್‌ಐರ್ಆ ಪ್ರಕ್ರಿಯೆಯ ಮೂಲಕ ಮತಪಟ್ಟಿಯಿಂದ ಹೊರಬಿದ್ದವರಿಗೆ ಪಡಿತರ ಮತ್ತು ಇತರ ಯಾವುದೇ ಸರ್ಕಾರಿ ಕಲ್ಯಾಣ ಯೋಜನೆಗಳನ್ನು ನೀಡುವುದಿಲ್ಲವೆಂದು ಆ ಎರಡೂ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿಗರು ಘೋಷಿಸಿದ್ದಾರೆ. ಮತಪಟ್ಟಿಯಿಂದ ಹೊರಹಾಕಲಾದವರ ಬ್ಯಾಂಕ್ ಪಾಸ್‌ಬುಕ್‌ಗಳನ್ನು ಸಹ ರದ್ದುಗೊಳಿಸಲಾಗುವುದು ಎಂದು ಬಿಹಾರದ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಹೇಳಿದ್ದಾರೆ. ಪಶ್ಚಿಮ ಬಂಗಾಳದಲ್ಲೂ ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯಿಂದ ಹೊರಬಿದ್ದ ಮಹಿಳೆಯರಿಗೆ ಅಲ್ಲಿನ ಅನ್ನಪೂರ್ಣ ಭಂಡಾರ್ ಯೋಜನೆಯ ಸೌಲಭ್ಯವನ್ನು ನಿಲ್ಲಿಸುವುದಾಗಿ ಅಲ್ಲಿನ ನೂತನ ಮಹಿಳಾ ಮತ್ತು ಸಾಮಾಜಿಕ ಕಲ್ಯಾಣ ಸಚಿವೆ ಅಗ್ನಿಮಿತ್ರ ಪಾಲ್ ಘೋಷಿಸಿದ್ದಾರೆ.

ಅವರ ಈ ಹೇಳಿಕೆಗಳು ಆ ರಾಜ್ಯಗಳಲ್ಲಿ ಮಾತ್ರವಲ್ಲದೆ, ಇಡೀ ದೇಶಾದ್ಯಂತ ಆತಂಕ ಮೂಡಿಸಿದೆ. ಕರ್ನಾಟಕದಲ್ಲಿ ಪಡಿತರ ಚೀಟಿ, ಆಧಾರ್ ಮತ್ತು ವೋಟರ್ ಐಡಿಯನ್ನು ಸರ್ಕಾರದ ಎಲ್ಲ ಜನಕಲ್ಯಾಣ ಯೋಜನೆಗಳಿಗೆ ಲಿಂಕ್ ಮಾಡಲಾಗಿದೆ. ಒಂದು ವೇಳೆ ಎಸ್‌ಐರ್ಆ ಗೊಂದಲದಿಂದ ವೋಟರ್ ಐಡಿ ರದ್ದಾದರೆ, ಅದರ ಬೆನ್ನಲ್ಲೇ ಪಡಿತರ ಚೀಟಿಗೂ ಕುತ್ತು ಬರುತ್ತದೆ. ಪರಿಣಾಮವಾಗಿ ಬಡ ಮಹಿಳೆಯರ ಆಸರೆಯಾಗಿರುವ ಶಕ್ತಿ ಮತ್ತು ಗೃಹಲಕ್ಷ್ಮಿ ಯೋಜನೆ, ವೃದ್ಧಾಪ್ಯ ಪಿಂಚಣಿ, ವಿಧವಾ ವೇತನ ಹಾಗೂ ಉಚಿತ ರೇಷನ್ ಸೌಲಭ್ಯಗಳಿಂದ ಬಡ ನಾಗರಿಕರು ವಂಚಿತರಾಗಬೇಕಾಗುತ್ತದೆ.

ಮತ್ತೊಂದು ಆಘಾತಕಾರಿ ಸಂಗತಿ ಎಂದರೆ, ಮತದಾನದ ಹಕ್ಕು ಉಳಿಸಿಕೊಳ್ಳುವ ಕಾನೂನು ಹೋರಾಟದಲ್ಲೂ ಜನರಿಗೆ ಸರಿಯಾದ ನ್ಯಾಯ ಸಿಗದಿದ್ದರೆ, ಜನರು ತಮ್ಮದೇ ದೇಶದಲ್ಲಿ ದ್ವಿತೀಯ ದರ್ಜೆಯ ಪ್ರಜೆಗಳಾಗಿ ಶೋಷಣೆ ಅನುಭವಿಸಬೇಕಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಜಾಗತಿಕ ಇತಿಹಾಸವನ್ನು ಗಮನಿಸಿದರೆ, ಮ್ಯಾನ್ಮಾರ್‌ನಲ್ಲಿ 1982ರವರೆಗೆ ಮತದಾನದ ಹಕ್ಕನ್ನು ಹೊಂದಿದ್ದ ರೋಹಿಂಗ್ಯಾ ಮುಸ್ಲಿಮರನ್ನು ಹೊಸ ಪೌರತ್ವ ಕಾಯ್ದೆಯ ಮೂಲಕ ಹಕ್ಕು ವಂಚಿತರನ್ನಾಗಿ ಮಾಡಿ, ತಾಯ್ನಾಡಿನಲ್ಲೇ ಅಕ್ರಮ ವಲಸಿಗರು ಎಂದು ಘೋಷಿಸಿ ದೇಶಭ್ರಷ್ಟರನ್ನಾಗಿ ಮಾಡಲಾಯಿತು. ಅವರ ಮೇಲೆ ಶೋಷಣೆ-ದಾಳಿಗಳು ನಡೆದವು. ಅದೇ ರೀತಿ, 1961ರಲ್ಲಿ ಕುವೈತ್ ಸ್ವತಂತ್ರವಾದಾಗ ಅಲ್ಲಿನ ಅಲೆಮಾರಿ ಬೈದೂನ್ ಸಮುದಾಯದ ಜನ ಸರಿಯಾದ ದಾಖಲೆಗಳನ್ನು ಸಲ್ಲಿಸದ ಕಾರಣ ಅವರಿಗೆ ಪೌರತ್ವ ಮತ್ತು ಮತದ ಹಕ್ಕನ್ನು ನಿರಾಕರಿಸಲಾಯಿತು; ಅವರು ಇಂದಿಗೂ ಬ್ಯಾಂಕ್ ಖಾತೆ, ಉಚಿತ ಶಿಕ್ಷಣ ಮತ್ತು ಚಾಲನಾ ಪರವಾನಗಿ ಇಲ್ಲದೆ ತೀವ್ರ ಶೋಷಣೆಗೆ ಒಳಗಾಗುತ್ತಿದ್ದಾರೆ. ಇಂತಹ ಭೀಕರ ಇತಿಹಾಸ ನಮ್ಮ ಮುಂದಿದೆ.

ಇದೇ ರೀತಿ ಹಲವು ದೇಶಗಳಲ್ಲಿ ಮತ ಹಕ್ಕಿನಿಂದ ವಂಚಿತರಾದ ಲಕ್ಷಾಂತರ ಜನ ತನ್ನದೇ ತಾಯ್ನಾಡಿನಲ್ಲಿ ಸರ್ಕಾರದ ಯಾವುದೇ ಸೌಲಭ್ಯಗಳಿಲ್ಲದೆ ಶೋಷಣೆ ಅನುಭವಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಭಾರತದ ನಾಗರಿಕರೂ ಅಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು. ಅಂತಹ ವಿಪತ್ತಿನಿಂದ ತಪ್ಪಿಸಿಕೊಳ್ಳಲು ರಾಜ್ಯದ ಜನರು ಎಸ್‌ಐಆರ್ ವಿರುದ್ಧ ಸಜ್ಜುಗೊಳ್ಳಬೇಕಿದೆ. ಎಸ್‌ಐಆರ್‌ನ ಸಂಚನ್ನು ಹಿಮ್ಮೆಟ್ಟಬೇಕಿದೆ.

ಕಾಂಗ್ರೆಸ್ ಅವಧಿಯಲ್ಲಿಯೂ ನಡೆಯದ ಪಂಚಾಯತ್ ಚುನಾವಣೆ: ರಾಜೀವ್ ಗಾಂಧಿ ಕನಸಿಗೆ ಎಳ್ಳುನೀರು

ಪ್ರಜಾಪ್ರಭುತ್ವದ ತಿರುಳನ್ನು ಅರಿತಿರುವ ಸಿದ್ದರಾಮಯ್ಯನವರು, ಶೀಘ್ರದಲ್ಲಿ ಮೂರು ಹಂತದ ಸ್ಥಳೀಯ ಪಂಚಾಯತ್ ಚುನಾವಣೆಗಳನ್ನು ನಡೆಸಿ ಪ್ರಜಾಪ್ರಭುತ್ವದ ಬೇರುಗಳಿಗೆ ನೀರು ಉಣಿಸುವ ಕೆಲಸವನ್ನು ಮಾಡಲೇಬೇಕು.

ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳಿಗೆ ಎಲ್ಲರೂ ತಲೆಬಾಗಬೇಕು. ಗ್ರಾಮ ಪಂಚಾಯಿತಿಗಳು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕೆಲಸ ಮಾಡಲು ಹಣಕಾಸು ಮಾನವ ಸಂಪನ್ಮೂಲ ಒದಗಿಸಿ ಕೊಡಬೇಕಾದ ರಾಜ್ಯ ಸರ್ಕಾರ ಪಂಚಾಯತ್ ಚುನಾವಣೆ ನಡೆಸದೆ ಮಹಿಳೆಯರಿಗೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಜನರನ್ನು ರಾಜಕೀಯ ಅಧಿಕಾರದಿಂದ ದೂರವಿಟ್ಟಿರುವುದು ಕರ್ನಾಟಕದ ಒಂದು ಲಕ್ಷಕ್ಕೂ ಹೆಚ್ಚು ಜನಪ್ರತಿನಿಧಿಗಳಿಗೆ ಹಾಗೂ ಮೂರು ಕೋಟಿಗೂ ಅಧಿಕ ಮತದಾರ ಪ್ರಭುಗಳಿಗೆ ಮಾಡಿದ ಅನ್ಯಾಯ.

ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ದಿವಂಗತ ಅಬ್ದುಲ್ ನಜೀರ್ ಸಾಹೇಬರು ಜನರ ಕೈಗೆ ಅಧಿಕಾರ ನೀಡುವ ಮುಖಾಂತರ ಹಳ್ಳಿಗಳನ್ನು ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಸುಭದ್ರ ಬುನಾದಿಯನ್ನು ಕರ್ನಾಟಕದಲ್ಲಿ ಹಾಕಿದ್ದು ಇತಿಹಾಸ.

ದಿವಂಗತ ರಾಜೀವ್ ಗಾಂಧಿ ಅವರು 63ನೇ ಪಂಚಾಯತ್ ರಾಜ್ ತಿದ್ದುಪಡಿ ರಾಜ್ಯಸಭೆಯಲ್ಲಿ ಕೇವಲ ಒಂದು ಮತದಲ್ಲಿ ಬಿದ್ದಾಗ ಕಣ್ಣೀರು ಹಾಕಿದ ದೇಶದ ಮೊದಲ ಪ್ರಧಾನಿ. ಈಗ ಅದೇ ಪಕ್ಷ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದರೂ ಮೂರು ಹಂತದ ಪಂಚಾಯತ್ ರಾಜ್ ಚುನಾವಣೆ ನಡೆಸದೇ ಇರುವುದು ಸಂವಿಧಾನ ವಿರೋಧಿ ನಡೆಯಲ್ಲವೇ?

ದೇಶದ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಪಂಚಾಯತ್ ರಾಜ್ ಮಂತ್ರಿಗಳು. ಡಾ. ಬಾಬಾ ಸಾಹೇಬರ ಸಮ ಸಮಾಜದ ನಿರ್ಮಾಣದಲ್ಲಿ ಹಳ್ಳಿಗಳ ಗ್ರಾಮ ಸಭೆ(ವಿಧಾನಸಭೆ) ಸಕಾಲಕ್ಕೆ ಚುನಾವಣೆ ನಡೆಸದೆ ಅವಮಾನತಿನಲ್ಲಿಡುವುದು ಯಾವ ನ್ಯಾಯ?

ಗ್ರಾಮ ಪಂಚಾಯಿತಿಗಳು ಸ್ವಯಂ ಆಡಳಿತ ಮತ್ತು ಸ್ವರಾಜ್ಯದ ಅಧಿಕಾರ ನಡೆಸುವಂತೆ ಮಾಡಬೇಕಾದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಗ್ರಾಮ ಪಂಚಾಯಿತಿಗಳನ್ನು ಜನಪ್ರತಿನಿಧಿಗಳಿಲ್ಲದೆ ದುರ್ಬಲಗೊಳಿಸುತ್ತಿರುವುದು ನೋವಿನ ಸಂಗತಿ. ಹಳ್ಳಿಗಳು ಅಭಿವೃದ್ಧಿ ಹೊಂದಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಯೋಜನೆಗಳ ಕ್ರಿಯೆ ಯೋಜನೆ ಮತ್ತು ಅನುಷ್ಠಾನಗೊಳಿಸಲು ಗ್ರಾಮ ಸಭೆಯ ಅನುಮೋದನೆ ತೆಗೆದುಕೊಳ್ಳಬೇಕೆಂದು ಕಾಯ್ದೆಯಲ್ಲಿದ್ದರೂ ಅದು ಮಾತ್ರ ಕಾಗದದ ಹುಲಿಯಾಗಿ ಉಳಿದಿರುವುದು ವಿಪರ್ಯಾಸ.

ಮೇಲಿನ ಹಂತದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಗ್ರಾಮ ಪಂಚಾಯತಿಗಳಿಗೆ ಸುತ್ತೋಲೆಗಳನ್ನು ಕಳುಹಿಸಿ ಹತ್ತಕ್ಷೇಪ ಮಾಡುತ್ತ ಗ್ರಾಮ ಪಂಚಾಯಿತಿಯನ್ನು



ಎಟಿಎಂ ರೀತಿಯಲ್ಲಿ ಬಳಸುತ್ತಿರುವುದು ಗ್ರಾಮಗಳ ಅಭಿವೃದ್ಧಿಗೆ ಮಾರಕ. ಇದಕ್ಕೆ ತಾಜಾ ಉದಾಹರಣೆ ಕೂಸಿನ ಮನೆ ಹಾಗೂ ಕಸವಿಲೇವಾರಿ ಘಟಕ ಮೇಲಿನ ಹಂತದಲ್ಲಿ ಯೋಜನೆಗಳನ್ನು ರೂಪಿಸಿದ ಮೇಲೆ ಅದಕ್ಕೆ ಬೇಕಾದ ಹಣಕಾಸು ಹಾಗೂ ಮಾನವ ಸಂಪನ್ಮೂಲ ಒದಗಿಸುವ ಜವಾಬ್ದಾರಿ ಕೂಡ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳದ್ದಾಗಿರುತ್ತದೆ.

224 ಶಾಸಕರಲ್ಲಿ ಎಷ್ಟು ಮಂದಿ 1993ರ 73, 74ನೇ ತಿದ್ದುಪಡಿಯ ಫಲಾನುಭವಿಗಳಾಗಿದ್ದೀರಿ. ನಿಮಗೆ ಆತ್ಮಸಾಕ್ಷಿ ಇದ್ದರೆ ನಿಮ್ಮನ್ನೇ ನೀವು ಪ್ರಶ್ನೆ ಮಾಡಿಕೊಳ್ಳಿ. 2028ರ ವೇಳೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯದಿದ್ದರೆ, 25 ಮಂದಿ ಎಂಎಲ್‌ಸಿಗಳು ನಮ್ಮಂತೆಯೇ ಬೀದಿಯಲ್ಲಿ ನಿಂತು ಹೋರಾಟ ಮಾಡುವ ಕಾಲ ದೂರವಿಲ್ಲ. ರಾಜ್ಯದ ಪ್ರಭಾವಿ ಸಚಿವರುಗಳ ಸಹೋದರರು ಬೆಳಗಾವಿ, ವಿಜಯಪುರದಲ್ಲಿ ಮೂರು ಜನ ಎಮ್‌ಎಲ್‌ಸಿಗಳು ನೀವು ಮನಸ್ಸು ಮಾಡಿದರೆ ಸರ್ಕಾರವನ್ನೇ ಅಲ್ಲಾಡಿಸಬಹುದು. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದಕ್ಕೆ ಕಷ್ಟಸಾಧ್ಯವೇ?

ಬೀದರ್‌ನಿಂದ ಚಾಮರಾಜನಗರದವರೆಗೆ ಮಹಿಳೆಯರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಜನರನ್ನು ರಾಜಕೀಯ ಅಧಿಕಾರದಿಂದ ದೂರವಿಟ್ಟಿರುವ ಶಾಸಕರುಗಳೇ ನಿಮಗೆ 2028ರ ಚುನಾವಣೆಯಲ್ಲಿ ಪ್ರಜಾಪ್ರಭುತ್ವದ ಮತದಾರ ಪ್ರಭುಗಳು ತಕ್ಕ ಪಾಠ ಕಲಿಸುತ್ತಾರೆ. ಶಾಸಕರು ಶಾಸನ ಮಾಡುವುದನ್ನು ಬಿಟ್ಟು ಬೇರೆಲ್ಲ ಕೆಲಸವನ್ನು ಮಾಡುತ್ತಿದ್ದಾರೆಂದು ಪಂಚಾಯತ್ ರಾಜ್ ಮಂತ್ರಿಗಳು ವಿಧಾನಸಭೆಯಲ್ಲಿ ಮಾತನಾಡಿದ್ದಾರೆ. ದಾವಣಗೆರೆ ಬಾಗಲಕೋಟೆ ಉಪಚುನಾವಣೆಗೆ ಆರು ತಿಂಗಳ ಒಳಗಾಗಿ ಇಡೀ ಎರಡು ಪಕ್ಷದ ಅತಿರಥ ಮಹಾರಥರನ್ನು ನಿಲ್ಲಿಸಿ ಚುನಾವಣೆ ಮಾಡಿದ್ದೀರಿ. ಅದೇ ಸ್ಥಳೀಯ ಸಂಸ್ಥೆ ಚುನಾವಣೆ ವಿಷಯದಲ್ಲಿ ಯಾಕೆ ಮಾತನಾಡುತ್ತಿಲ್ಲ. ಹಳ್ಳಿಗಳ ಅಭಿವೃದ್ಧಿಗೆ ಬರಬೇಕಾದ 15ನೇ ಹಣಕಾಸಿನ 2,500 ಕೋಟಿ ರೂಪಾಯಿ ಬರದೇ ಇರುವುದಕ್ಕೆ, 16ನೇ ಹಣಕಾಸು ಆಯೋಗದ ಹಣ ಬರುವುದಕ್ಕೆ ನಿಗದಿತ ಸಮಯದಲ್ಲಿ ಚುನಾವಣೆ ನಡೆಸದಿದ್ದರೆ ರಾಜ್ಯ ಸರ್ಕಾರವೇ ನೇರ ಹೊಣೆ.

ವಿದ್ಯಾರ್ಥಿಗಳಿಗೆ 5,000 ಹುದ್ದೆ ಕರೆದರೆ ಒಂದು ಲಕ್ಷ ಜನ ಅರ್ಜಿ ಹಾಕುತ್ತಾರೆ. 2028ಕ್ಕೆ 224 ಶಾಸಕ ಸ್ಥಾನಗಳು ಖಾಲಿಯಾಗುತ್ತವೆ. ಪ್ರತಿಯೊಂದು ಹಳ್ಳಿಯಿಂದ ವಿದ್ಯಾರ್ಥಿಗಳು, ರೈತರು, ಒಂದು ಲಕ್ಷ ಮಂದಿ ಗ್ರಾಮ ಪಂಚಾಯಿತಿ ಸದಸ್ಯರುಗಳು ನಾಮಪತ್ರ ಸಲ್ಲಿಸಿ ಅದೃಷ್ಟ ಪರೀಕ್ಷಿಸಿಕೊಳ್ಳಿ.

ಪಂಚಾಯತ್ ರಾಜ್ ಮಹಿಳೆಯರಿಗೆ ಶೇ.50ರಷ್ಟು ಅಧಿಕಾರ ನೀಡಿ, 224 ಶಾಸಕರಲ್ಲಿ 112 ಮಂದಿ ಮಹಿಳೆಯರನ್ನು ಶಾಸಕರನ್ನಾಗಿ ಮಾಡಿ. ನಿಮಗೆ ತಾಕತ್ತು, ದಮ್ಮಿದ್ದರೆ ಇದನ್ನು ಸಾಬೀತು ಮಾಡಿ ತೋರಿಸಿ, ಸುಮ್ಮನೆ ಕಥೆ ಹೇಳುವುದಲ್ಲ.

ಸಂವಿಧಾನ ಪುಸ್ತಕವನ್ನು ಕೈಯಲ್ಲಿ ಹಿಡಿದು ಸಂಸತ್ತಿನಲ್ಲಿ ನಡೆದಾಡುವ ನಿಮಗೆ ಸ್ಥಳೀಯ ಸಂಸ್ಥೆಗಳು ಚುನಾವಣೆ ನಡೆಸದಿರುವುದು ಸಂವಿಧಾನ ವಿರೋಧಿ ನಡೆ ಎಂದು ಯಾಕೆ ಅನಿಸುತ್ತಿಲ್ಲ. ಆರ್ಟಿಕಲ್ 356ರ ಪ್ರಕಾರ, ಸಂವಿಧಾನ ವಿರೋಧಿಯಾಗಿ ನಡೆದುಕೊಳ್ಳುತ್ತಿರುವ ಕರ್ನಾಟಕ ರಾಜ್ಯ ಸರ್ಕಾರವನ್ನು ವಜಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ತಾಲೂಕು ಪರಿಷತ್ ಮೆಂಬರ್‌ನಿಂದ ರಾಜ್ಯದ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಸಾಹೇಬರಿಗೆ ಕರ್ನಾಟಕ ಪಂಚಾಯತ್ ರಾಜ್ ಪರಿಷತ್ ಅಧಿನಿಯಮ 1993ರ 308-ಎಯಲ್ಲಿ ಚುನಾವಣೆಗಳ ವೇಳಾಪಟ್ಟಿ, ರಾಜ್ಯ ಚುನಾವಣೆ ಆಯೋಗವು ಪಂಚಾಯತ್ ಅವಧಿಯು ಪೂರ್ಣಗೊಳ್ಳುವುದಕ್ಕೆ ಮೊದಲು, ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಚುನಾವಣೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ 45 ದಿನಗಳಿಗೆ ಕಡಿಮೆ ಇಲ್ಲದಂತೆ ಸ್ಥಾನಗಳ ಮೀಸಲಾತಿ ಮತ್ತು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸತಕ್ಕದ್ದು ಎಂಬ ಮಾಹಿತಿ ತಿಳಿದಿಲ್ಲವೇ? ಪ್ರಜಾಪ್ರಭುತ್ವದ ತಿರುಳನ್ನು ಅರಿತಿರುವ ಸಿದ್ದರಾಮಯ್ಯನವರು, ಶೀಘ್ರದಲ್ಲಿ ಮೂರು ಹಂತದ ಸ್ಥಳೀಯ ಪಂಚಾಯತ್ ಚುನಾವಣೆಗಳನ್ನು ನಡೆಸಿ ಪ್ರಜಾಪ್ರಭುತ್ವದ ಬೇರುಗಳಿಗೆ ನೀರು ಉಣಿಸುವ ಕೆಲಸವನ್ನು ಮಾಡಲೇಬೇಕು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR